ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಮಂಗಳವಾರ, ಏಪ್ರಿಲ್ 30, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 349 RNI : 27369/75

janathavani@mac.com
www.janathavani.com
08192 254736 91642 99999

## ಮತ್ತೆ ಜೈಲು ಪಾಲಾದ ಮುರುಘಾ ಶ್ರೀ



ಚಿತ್ರದುರ್ಗ, ಏ. 29 - ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರು ಸೋಮವಾರ ಮತ್ತೆ ಜೈಲು ಪಾಲಾಗಿದ್ದಾರೆ.

ಪೋಕ್ಸೋ ಪ್ರಕರಣದಲ್ಲಿ ಮುರುಘಾ ಶರಣರಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಕಳೆದ ಮಂಗಳವಾರ ರದ್ದು ಮಾಡಿತ್ತು ಮತ್ತು ಒಂದು ವಾರದಲ್ಲಿ ನ್ಯಾಯಾಂಗ ಬಂಧನಕ್ಕೆ ತೆರಳುವಂತೆ ಆರೋಪಿಗೆ ಸೂಚಿಸಿತ್ತು. ಅದರಂತೆ ಶರಣರು ಚಿತ್ರದುರ್ಗದ ನ್ಯಾಯಾಲಯಕ್ಕೆ ಶರಣಾಗಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೇ 27ಕ್ಕೆ ಮುಂದಿನ ವಿಚಾರಣೆ ನಿಗದಿಗೊಳಿಸಲಾಗಿದೆ.

## ಎನ್.ಇ.ಟಿ. ಪರೀಕ್ಷೆ ಜೂನ್ 18ಕ್ಕೆ ಮುಂದೂಡಿಕೆ

ನವದೆಹಲಿ, ಏ. 29 – ಯು.ಪಿ.ಎಸ್.ಸಿ ಪರೀಕ್ಷೆಯ ಜೊತೆ ಎನ್.ಇ.ಟಿ. ಪರೀಕ್ಷೆ ಏಕಕಾಲಕ್ಕೆ ಬರುವುದನ್ನು ತಪ್ಪಿಸುವ ಸಲುವಾಗಿ, ಎನ್.ಇ.ಟಿ. ಪರೀಕ್ಷೆಯನ್ನು ಜೂನ್ 18ಕ್ಕೆ ಮುಂದೂಡಲಾಗಿದೆ. ಈ ಹಿಂದೆ ಜೂನ್ 16ರಂದು ಪರೀಕ್ಷೆ ನಡೆಸಲು ಉದ್ದೇಶಿಸಲಾಗಿತ್ತು ಎಂದು ಯು.ಜಿ.ಸಿ. ಅಧ್ಯಕ್ಷ ಜಗದೇಶ್ ಕುಮಾರ್ ತಿಳಿಸಿದ್ದಾರೆ.

# ಸಿಇಟಿ ಮರು ಪರೀಕ್ಷೆ ಇಲ್ಲ

## ಪಠ್ಯಕ್ರಮ ಹೊರತಾದ ಪ್ರಶ್ನೆಗಳ ಪರಿಗಣನೆ ಇಲ್ಲ

**ನಿಗದಿಯಂತೆ ಫಲಿತಾಂಶ ಮೇ ತಿಂಗಳಲ್ಲೇ ಪ್ರಕಟ**

ಬೆಂಗಳೂರು, ಏ. 29 - ಪಠ್ಯಕ್ರಮದ ಹೊರತಾದ ಪ್ರಶ್ನೆಗಳನ್ನು ಸಿಇಟಿ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ ಎಂದು ಸರ್ಕಾರ ಘೋಷಣೆ ಮಾಡಿರುವ ಜೊತೆಗೆ, ಮರು ಪರೀಕ್ಷೆ ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಸಂಬಂಧ ಪ್ರಕಟಣೆ ನೀಡಿರುವ ಉನ್ನತ ಶಿಕ್ಷಣ ಪ್ರಧಾನ ಕಾರ್ಯದರ್ಶಿ ಶ್ರೀಕರ್ ಎಂ.ಎಸ್. ಅವರು ಗಣಿತ, ಭೌತಶಾಸ್ತ್ರ, ರಾಸಾಯನ ಶಾಸ್ತ್ರ, ಜೀವ ಶಾಸ್ತ್ರಗಳಲ್ಲಿನ ಒಟ್ಟಾರೆ 50 ಅಂಕಗಳು ಪಠ್ಯಕ್ರಮ ಹೊರತಾಗಿವೆ ಎಂದು ಮಾಹಿತಿ ನೀಡಿದ್ದಾರೆ.

ಈ ಎಲ್ಲ ಗೊಂದಲದ ನಡುವೆಯೂ ನಿಗದಿಯಂತೆ ಸಿಇಟಿ ಪರೀಕ್ಷೆ ಫಲಿತಾಂಶ ಮೇ ತಿಂಗಳಲ್ಲೇ ಪ್ರಕಟಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ. ಭೌತಶಾಸ್ತ್ರದಲ್ಲಿ 9, ರಾಸಾಯನ ಶಾಸ್ತ್ರ ದಲ್ಲಿ 15, ಗಣಿತ 15, ಜೀವಶಾಸ್ತ್ರದಲ್ಲಿನ 11 ಅಂಕಗಳನ್ನು ಹೊರಗಿಟ್ಟು ಮೌಲ್ಯಮಾಪನ ಮಾಡಲಾಗುವುದು.

ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕ ಪಡುವ ಅಗತ್ಯವಿಲ್ಲ, ಒಟ್ಟಾರೆ 4 ಪಠ್ಯಗಳಿಂದ 240 ಅಂಕಗಳಿಗೆ ಬದಲಾಗಿ 190 ಅಂಕಗಳನ್ನು ಮಾತ್ರ ಪರಿಗಣಿಸಿ ವಿದ್ಯಾರ್ಥಿಗಳಿಗೆ ಅವರು ಪಡೆದ ಅಂಕಗಳ ಮೌಲ್ಯದ ಮೇಲೆ ರ್‍ಯಾಂಕ್‌ಗಳನ್ನು ನೀಡಲಾಗುವುದು.

ಸಿಇಟಿ ಅಂಕಗಳ ಜೊತೆಗೆ ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿಗಳು ಪಡೆದಿರುವ 50 ಅಂಕಗಳನ್ನು ರ್‍ಯಾಂಕ್ ನೀಡುವ ಸಂದರ್ಭದಲ್ಲಿ ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ. ಪರಿಣಿತ ಸಮಿತಿಯ ವರದಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕೆಇಎಯ ಮತ್ತು ಸಿಇಟಿ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತು ಸಾಮಾನ್ಯತೆಯನ್ನು ಉಳಿಸಲು ನಿರ್ಧರಿಸಿದೆ. (4ನೇ ಪುಟಕ್ಕೆ)

## ಲೆಕ್ಕ ಪರಿಶೋಧಕರ ಪರೀಕ್ಷೆ ಮುಂದೂಡಿಕೆಗೆ 'ಸುಪ್ರೀಂ' ನಕಾರ

ನವದೆಹಲಿ, ಏ. 29 - ಬರುವ ಮೇ ತಿಂಗಳಲ್ಲಿ ನಿಗದಿಯಾಗಿರುವ ಲೆಕ್ಕ ಪರಿಶೋಧಕರ ಪರೀಕ್ಷೆಯನ್ನು ಮುಂದೂಡಬೇಕೆಂಬ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಲೆಕ್ಕಪರಿಶೋಧಕರ ಚುನಾವಣೆ ಮೇ 6 ಹಾಗೂ 12ರಂದು ನಿಗದಿಯಾಗಿದೆ. ಲೋಕಸಭಾ ಚುನಾವಣೆಗಳು ಮೇ 7 ಹಾಗೂ 13ರಂದು ನಡೆಯಲಿವೆ.

ಲೆಕ್ಕಪರಿಶೋಧಕರ ಸಂಸ್ಥೆಯು ನಿಗದಿ ಪಡಿಸಿರುವ ಪರೀಕ್ಷಾ ದಿನಗಳು ಚುನಾವಣೆಯ ದಿನ ಬರುವುದಿಲ್ಲ. ಹೀಗಾಗಿ ಮುಂದೂಡಿಕೆಯ ಅರ್ಜಿ ಪರಿಶೀಲಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.





## ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಬೆಂಬಲಿಸಬೇಕು



ದಾವಣಗೆರೆ, ಏ.29- ದಾವಣಗೆರೆ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವಂತೆ ಚಿತ್ರದುರ್ಗ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಎಸ್.ಎಸ್.ಬಕ್ಕೇಶ್ ಕರೆ ನೀಡಿದರು.

ತ್ಯಾವಣಿಗಿ, ಹೊಸಳ್ಳಿ, ಕಣಿವೆ ಬಿಳಚಿ, ಚಿರಡೋಣಿ, ನಲ್ಕುದುರೆ, ವೆಂಕಟೇಶ್ವರ ಕ್ಯಾಂಪ್, ಕಬ್ಬಳ, ಕಾಶೀಪುರ ಗ್ರಾಮಗಳಲ್ಲಿ ಲೋಕ ಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ (4ನೇ ಪುಟಕ್ಕೆ)









# ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಬಿಜೆಪಿಗೆ ಮತ ನೀಡಬೇಕು



### ಸಮರ್ಥ ನಾಯಕ

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಲ್ಯಾಣದಿಂದ ಹಿಡಿದು, ವಿಶ್ವ ಮಟ್ಟದಲ್ಲಿ ದೇಶದ ಗೌರವವನ್ನು ಹೆಚ್ಚಿಸುವಂತಹ ಕೆಲಸ ಮಾಡಿದೆ.'

**- ಹೆಚ್.ಎಸ್. ಶಿವಶಂಕರ್,** ಮಾಜಿ ಶಾಸಕರು, ಹರಿಹರ.

ಹರಿಹರ, ಏ.29- ಮತದಾರರು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೀಡುವ ಒಂದು ಮತ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮದೇವತೆ ಊರಮ್ಮ ದೇವಿ ದೇವಸ್ಥಾನದಲ್ಲಿ ಜೆಡಿಎಸ್ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಜೊತೆಗೆ ಊರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಬಡಾವಣೆಯಲ್ಲಿ ಜಂಟಿಯಾಗಿ ಮತಯಾಚನೆ ವೇಳೆ ಅವರು ಮಾತನಾಡಿದರು.

ಕಳೆದ ಹತ್ತು ವರ್ಷಗಳ ಹಿಂದೆ ಬಿಜೆಪಿ ಪಕ್ಷಕ್ಕೆ ನೀಡಿದ ಮತಗಳಿಂದಾಗಿ ಜಿಲ್ಲೆಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ 1070 ಕೋಟಿ ರೂಪಾಯಿ ಅಭಿವೃದ್ಧಿ ಕಾರ್ಯವಾಗಿದ್ದು, ಅದರ ಜೊತೆಗೆ 106 ಕೋಟಿ ಬಸ್ ನಿಲ್ದಾಣ, 51 ಸಾವಿರ ಪಾಸ್ ಪೋರ್ಟ್ ವಿತರಣೆ, 15 ಕೋಟಿ ವೆಚ್ಚದಲ್ಲಿ ಇಎಸ್ಐ ಆಸ್ಪತ್ರೆ, ತುಂಗಾ ನಾಲಾ ಆಧುನೀಕರಣ, 29ಜನೌಷಧಿ ಕೇಂದ್ರಗಳು, ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ 790 ಕಿಲೋ ಮೀಟರ್ ರಸ್ತೆ ಅಭಿವೃದ್ಧಿ, 13.5 ಕೋಟಿ ರೂ. ವೆಚ್ಚದಲ್ಲಿ ಕೇಂದ್ರೀಯ ವಿದ್ಯಾಶಾಲೆ, 25 ಕೋಟಿ ವೆಚ್ಚದಲ್ಲಿ ದಿವ್ಯಾಂಗ ವ್ಯಕ್ತಿಗಳ ಚಿಕಿತ್ಸಾ ಕೇಂದ್ರ, ರೈತರಿಗೆ ಫಸಲ್ ಬಿಮಾ ಯೋಜನೆ ಅಡಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ದಾವಣಗೆರೆ ಜಿಲ್ಲೆಯನ್ನು ರಾಜ್ಯದಲ್ಲಿ ಒಂದು ಮಾದರಿಯ ಜಿಲ್ಲೆಯನ್ನಾಗಿ ಮಾಡಿದ್ದರಿಂದ, ಈ ಬಾರಿಯೂ ಕೂಡ ಮತದಾರರು ಬಿಜೆಪಿ ಪಕ್ಷದ ಅಭ್ಯರ್ಥಿ ಗಾಯತ್ರಿ ಜಿ.ಎಂ.ಸಿದ್ದೇಶ್ವರ ಅವರನ್ನು ಭಾರೀ ಮತಗಳ ಅಂತರದಿಂದ ಗೆಲ್ಲಿಸುವಂತೆ ಹೇಳಿದರು.

ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಲ್ಯಾಣದಿಂದ ಹಿಡಿದು, ವಿಶ್ವಮಟ್ಟದಲ್ಲಿ ದೇಶದ ಗೌರವವನ್ನು ಹೆಚ್ಚಿಸುವಂತಹ ಕೆಲಸ ಮಾಡಿದೆ. ಇಂತಹ ಸಮರ್ಥ ನಾಯಕನ ನೇತೃತ್ವಕ್ಕೆ ಮತ್ತೆ ದೇಶದ ಚುಕ್ಕಾಣಿ ವಹಿಸುವ ಸದಾವಕಾಶ ಮತದಾರರಿಗೆ ಒಲಿದಿದ್ದರಿಂದ ಮತ್ತೊಮ್ಮೆ ಬಿಜೆಪಿ ಪಕ್ಷಕ್ಕೆ ಮತವನ್ನು ಹಾಕುವುದರ ಮೂಲಕ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಒಂದು ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲ್ಲಿಸುವ ಕಾರ್ಯವನ್ನು ಮಾಡೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯೆ ನಿಂಬಕ್ಕ ಚಂದಾಪೂರ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಬಿಜೆಪಿ, ಜೆಡಿಎಸ್ ಪಕ್ಷದ ಮುಖಂಡರಾದ ಪೂಜಾರ್ ಈರಣ್ಣ, ಸುರೇಶ್ ಚಂದಾಪೂರ್, ಅಡಕಿ ಕುಮಾರ್, ಬೆಣ್ಣೆ ರೇವಣಸಿದ್ದಪ್ಪ, ಗೌಡ್ರು ಪುಟ್ಟಪ್ಪ, ಜಿ ನಂಜಪ್ಪ, ಬಸವರಾಜಪ್ಪ, ರೂಪಾ ಕಾಟ್ವೆ, ಬೆಣ್ಣೆ ಸಿದ್ದೇಶ್, ಮಹಾಂತೇಶ್, ಕರಿಬಸಪ್ಪ ಕಂಚಿಕೇರಿ, ಪಾಪಣ್ಣ, ಮೋಹನ್ ಕೊಂಡಜ್ಜಿ, ವೇದಮೂರ್ತಿ, ಸುನಿಲ್, ಬಾತಿ ಚಂದ್ರಶೇಖರ್, ಹಾವನೂರು ಈರಣ್ಣ, ಮಜ್ಜಿಗೆ ಚಂದ್ರಪ್ಪ, ಸಂತೋಷ ಗುಡಿಮನಿ, ರಾಘು ಚೌಗಲೆ, ದೊಗ್ಗಳ್ಳಿ ಗುರುಮೂರ್ತಿ, ಗಜೇಂದ್ರ ಬೇಲೂರು, ಪ್ರವೀಣ್ ಮಜ್ಜಿಗೆ, ಸುನಂದ, ಬಿ.ಆರ್. ಸುರೇಶ್, ರುದ್ರೇಶ್, ಹಾಲೇಶ್, ಮಂಜುನಾಥ್ ಇತರರು ಹಾಜರಿದ್ದರು.

# ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಬೆಂಬಲಿಸಿದ ಹರಿಹರದ ಕಮ್ಯುನಿಸ್ಟ್



ಹರಿಹರ, ಏ, 29- ಸಂವಿಧಾನ, ಪ್ರಜಾತಂತ್ರ, ಬಹುತ್ವ ಭಾರತ ಉಳಿವಿಗಾಗಿ ಕಮ್ಯುನಿಸ್ಟ್ ಪಕ್ಷವು ಮೇ 7 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ತೀರ್ಮಾನ ಮಾಡಲಾಗಿದೆ ಎಂದು ಕಮ್ಯುನಿಸ್ಟ್ ಪಕ್ಷದ ಮುಖಂಡರು ತಿಳಿಸಿದರು.

ಹಂಸಾಗರ ಕಾಂಪೌಂಡ್ ಆವರಣದಲ್ಲಿರುವ ಕಮ್ಯುನಿಸ್ಟ್ ಪಕ್ಷದ ನರಸಿಂಹನ್ ಭವನದಲ್ಲಿ ಜರುಗಿದ ಕಮ್ಯುನಿಸ್ಟ್ ಪಕ್ಷದ ಮುಖಂಡರ, ಪ್ರಗತಿಪರ ಚಿಂತಕರ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು.

ಕೇಂದ್ರದಲ್ಲಿ ಆಡಳಿತದಲ್ಲಿರುವ ಬಿಜೆಪಿ ಸರ್ಕಾರ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿದೆ. ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗಲೆಂದು 4 ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಅನುಷ್ಠಾನಕ್ಕೆ ತಂದು, ಕಾರ್ಮಿಕರ ಶಕ್ತಿಯನ್ನು ಕುಗ್ಗಿಸಿದೆ. ಕೆಲಸದ ಭದ್ರತೆ ಇಲ್ಲದಂತಾಗಿದೆ. ಮೊದಲಿನಂತೆ ಕಾರ್ಮಿಕ ಸಂಘಗಳು ಮುಷ್ಕರ ಮಾಡಿದರೆ ದಂಡ ವಿಧಿಸಲಾಗುತ್ತಿದೆ, ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣಕ್ಕೆ ಅನುಕೂಲ ಮಾಡಿಕೊಟ್ಟಿದೆ. ಅಲ್ಲದೆ ಸಮಾಜದಲ್ಲಿನ ಸಾಮರಸ್ಯದ ಬದುಕಿಗೆ ವಿಷ ಬೀಜ ಬಿತ್ತಿದೆ. ಇಂತಹ ಅನಿಷ್ಟ ಪದ್ಧತಿಗಳ ನಿರ್ಮೂಲನೆಗಾಗಿ ಬಿಜೆಪಿ ಸರ್ಕಾರವನ್ನು ಸೋಲಿಸಬೇಕಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಎಸ್. ರಾಮಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಗೆಲುವಿನಿಂದ ದಾವಣಗೆರೆ ಜಿಲ್ಲೆಗೆ, ಹರಿಹರ ತಾಲ್ಲೂಕಿನಲ್ಲಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯಾಗುವುದು ಖಂಡಿತ. ಈ ಬಗ್ಗೆ ಅನುಮಾನ ಬೇಡ. ಎಲ್ಲರೂ ಸೇರಿ ಹೆಚ್ಚಿನ ಬಹುಮತದಿಂದ ಅವರನ್ನು ಗೆಲ್ಲಿಸೋಣ ಎಂದರು.

ನಗರಸಭಾ ಸದಸ್ಯ ರಜನಿಕಾಂತ್ ಮಾತನಾಡಿ, ಬಡವರ, ಜನಸಾಮಾನ್ಯರ ಬದುಕಿಗೆ ಬಿಜೆಪಿಗಿಂತ ಕಾಂಗ್ರೆಸ್ ಪಕ್ಷವೇ ಲೇಸು. ಹಾಗಾಗಿ ಕಾಂಗ್ರೆಸ್ ಪಕ್ಷಕ್ಕೆ ಬಂದಿರುವೆ. ಎಲ್ಲರೂ ಸೇರಿ ಡಾ. ಪ್ರಭಾ ಮಲ್ಲಿಕಾರ್ಜುನ್ ರವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿ, ನಮ್ಮ ಸ್ವಾಭಿಮಾನದ ಬದುಕಿಗೆ ನೆಮ್ಮದಿ ತಂದುಕೊಳ್ಳೋಣವೆಂದರು.

ಸಭೆಯ ಅಧ್ಯಕ್ಷತೆಯನ್ನು ಎಚ್. ಕೆ. ಕೊಟ್ರಪ್ಪ ವಹಿಸಿದ್ದರು. ಸಿಪಿಐ ಜಿಲ್ಲಾ ಸಹ ಕಾರ್ಯದರ್ಶಿ ಆವರಗೆರೆ ವಾಸು, ತಾಲ್ಲೂಕ್ ಕಾರ್ಯದರ್ಶಿ ಟಿ.ಹೆಚ್. ನಾಗರಾಜ್, ಕುಮಾರ್ ನಾಯಕ್, ಮುಖಂಡರಾದ ಕೃಷ್ಣಮೂರ್ತಿ, ನಾಗರಾಜ್ ಹಿತ್ತಲಮನೆ, ಎಚ್. ಸಿ. ಮೈದೂರು, ಬಿ. ಹೆಚ್. ಚಂದ್ರಪ್ಪ, ಶಿವಕುಮಾರ್ ಸ್ವಾಮೀಜಿ, ಈರಣ್ಣ ರೆಡ್ಡಿ, ಕೆ.ಬಿ. ರಾಜಶೇಖರ್, ಸುರೇಶ್ ಹಾದಿಮನೆ, ಕೆ ಆರ್ ಗಂಗಾಧರ ಇನ್ನು ಅನೇಕರು ಉಪಸ್ಥಿತರಿದ್ದರು

# ದಲಿತ ಸಮಾಜದ ಏಳಿಗೆಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟ ಕಾಂಗ್ರೆಸ್




### ಹರಹರದಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ

ಹರಿಹರ, ಏ.29- ಕಾಂಗ್ರೆಸ್ ಪಕ್ಷವು ದಲಿತ ಸಮಾಜದ ಏಳಿಗೆಗಾಗಿ ಸಾಕಷ್ಟು ಅನುಕೂಲ ಮಾಡಿದ್ದರಿಂದ ಹರಿಹರ ತಾಲ್ಲೂಕಿನ ದಲಿತ ಸಮಾಜದವರು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಮತವನ್ನು ಹಾಕುವುದರ ಮೂಲಕ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಭಾರೀ ಬಹುಮತದೊಂದಿಗೆ ಗೆಲ್ಲಿಸಬೇಕು ಎಂದು ಮಾಜಿ ಸಚಿವ ಹೆಚ್.ಆಂಜನೇಯ ಕರೆ ನೀಡಿದರು.

ನಗರದ ಪತ್ರಿಕಾಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಬಹಳಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿ, ರಾಜ್ಯದಲ್ಲಿ ದಾವಣಗೆರೆ ನಗರವನ್ನು ಮಾದರಿ ನಗರವನ್ನಾಗಿ ಮಾಡಿದ್ದರಿಂದ ಅವರ ಮನೆತನದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ದಲಿತ ಸಮಾಜದ ಜನರು ಹೆಚ್ಚು ಮತಗಳನ್ನು ಹಾಕುವ ಮೂಲಕ ಅವರನ್ನು ಭಾರೀ ಬಹುಮತದೊಂದಿಗೆ ಗೆಲ್ಲಿಸುವ ಕಾರ್ಯವನ್ನು ಮಾಡಬೇಕೆಂದು ಹೇಳಿದರು.


ರಾಜ್ಯದಲ್ಲಿ ಇದುವರೆಗೂ ಆಡಳಿತ ಮಾಡಿರುವ ಕಾಂಗ್ರೆಸ್ ಪಕ್ಷವು ಕೇವಲ ಒಂದು ಜಾತಿಗೆ ಸೀಮಿತವಾಗಿ ಅಧಿಕಾರ ಮಾಡಿಲ್ಲ ಮತ್ತು ರಾಜ್ಯದಲ್ಲಿ ಎಸ್.ನಿಜಲಿಂಗಪ್ಪ, ಬಿ.ಡಿ. ಜತ್ತಿ, ವೀರೇಂದ್ರ ಪಾಟೀಲ್, ಕೆಂಗಲ್ ಹನುಮಂತಯ್ಯ, ಎಸ್.ಎಂ.ಕೃಷ್ಣ, ಎಸ್.ಬಂಗಾರಪ್ಪ, ದೇವರಾಜ ಅರಸು, ಸಿದ್ದರಾಮಯ್ಯ ಸೇರಿದಂತೆ ಎಲ್ಲಾ ವರ್ಗದವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಕೊಟ್ಟಿದೆ. ಮತ್ತು ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಅವಕಾಶ ಇತ್ತು. ಆದರೆ, ದುರದೃಷ್ಟವಶಾತ್ ಅವರು ಕೇಂದ್ರದ ರಾಜಕಾರಣಕ್ಕೆ ಒಲವು ನೀಡಿದ್ದರಿಂದ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗುವಂತಾಗಿದೆ ಎಂದರು.

ರಾಜ್ಯದಲ್ಲಿ ನಾನು ಸಮಾಜ ಕಲ್ಯಾಣ ಸಚಿವನಾಗಿದ್ದ ಕಾಲದಲ್ಲಿ ದಲಿತರಿಗೆ ಹೆಚ್ಚು ಅನುಕೂಲ ಮಾಡಬೇಕೆಂಬ ಉದ್ದೇಶದಿಂದ ಎಸ್.ಇ.ಪಿ. ಮತ್ತು ಟಿ.ಎಸ್.ಪಿ ಕಾಯ್ದೆ ಜಾರಿಗೆ ತರಲಾಯಿತು. ಆದರೆ, ಅದನ್ನು ಸರಿಯಾಗಿ ದಲಿತರಿಗೆ ಬಳಕೆ ಮಾಡುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ ಮತ್ತು ಅದರಲ್ಲಿ ಹತ್ತು ಸಾವಿರ ಕೋಟಿ ಹಣವನ್ನು, ದಲಿತ ಸಮಾಜದ ಬಡವರಿಗೆ ಬಳಕೆ ಮಾಡದೇ, ರಸ್ತೆ ಅಭಿವೃದ್ಧಿಗೆ ಬಳಕೆ ಮಾಡಿ ದಲಿತ ಜನರು ಇನ್ನೂ ಬಡತನದಲ್ಲಿ ಜೀವನ ಮಾಡುವಂತೆ ಮಾಡಿದ್ದಾರೆ. ಹಾಗಾಗಿ ಬಿಜೆಪಿ ಪಕ್ಷವು ಜನ ವಿರೋಧಿ ಹಾಗೂ ಪ್ರಜಾತಂತ್ರ ವಿರೋಧಿ ಪಕ್ಷವಾಗಿದೆ ಎಂದು ಹೇಳಿದರು.

**ಕಾಂಗ್ರೆಸ್ ಪಕ್ಷದ ಗೆಲುವಿಗೆ ಅದರದೇ ಆದ ದಲಿತ, ಅಲ್ಪಸಂಖ್ಯಾತ, ಸೇರಿದಂತೆ ಇತರೆ ಸಮುದಾಯದ ಸಾಂಪ್ರದಾಯಿಕ ಮತಗಳು ಇರೋದರಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕ ಮತಗಳನ್ನು ಪಡೆಯುವುದಕ್ಕೆ ಸುಗಮ ದಾರಿ ಇರುತ್ತದೆ. ಆದರೆ, ಜಿ.ಬಿ. ವಿನಯಕುಮಾರ್ ಅವರು ಪಕ್ಷಕ್ಕೆ ಹಿನ್ನಡೆ ಮಾಡುವ ದೃಷ್ಟಿಯಿಂದ ಪಕ್ಷೇತರರಾಗಿ ಸ್ಪರ್ಧೆ ಮಾಡಿದ್ದು, ಅವರ ಪರವಾಗಿ ಅಹಿಂದ ಮತಗಳು ಯಾವುದೇ ಕಾರಣಕ್ಕೂ ಬೀಳಲಿಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಕುರುಬ ಸಮುದಾಯಕ್ಕೆ 28 ಕ್ಷೇತ್ರಗಳಲ್ಲಿ ಒಬ್ಬರಿಗೂ ಟಿಕೆಟ್ ಕೊಟ್ಟಿಲ್ಲ. ಆದರೆ, ಅದರ ಬಗ್ಗೆ ಇದುವರೆಗೂ ಆ ಸಮಾಜದವರು ಯಾವುದೇ ರೀತಿಯ ಅಪಸ್ವರದ ಮಾತುಗಳನ್ನು ಹೇಳದೇ ಇರುವುದನ್ನು ನೋಡಿದರೆ, ಅವರಿಗೆ ಎಷ್ಟೆಲ್ಲಾ ತಾಳ್ಮೆಯ ಗುಣಗಳು ಇವೆ ಎಂಬುದನ್ನು ಕಾಣುತ್ತೇವೆ.**

**- ಹೆಚ್. ಆಂಜನೇಯ, ಮಾಜಿ ಸಚಿವರು**

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ನಗರಸಭೆ ಸದಸ್ಯ ರಜನಿಕಾಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಮುಖಂಡರಾದ ಸುರೇಶ್ ಹಾದಿ ಮನಿ, ಎಂ.ಬಿ.ಅಣ್ಣಪ್ಪ, ತಾ. ಮಾದಿಗ ಸಮಾಜದ ಅಧ್ಯಕ್ಷ ಆನಂದ್‌ಕುಮಾರ್, ಕಾರ್ಯದರ್ಶಿ ಹೆಚ್.ಶಿವಪ್ಪ, ಹೆಚ್. ಎನ್.ನಾಗರಾಜ್, ಬಿ.ಎನ್. ರಮೇಶ್, ಸಂತೋಷ ನೋಟದರ್, ಕಿರಣ್ ಭೂತೆ, ಸಂತೋಷ ದೊಡ್ಡಮನೆ, ವಿಜಯ ಕುಮಾರ್, ಭಾಗ್ಯಮ್ಮ, ನಾಗಮ್ಮ, ತಿಪ್ಪೇಸ್ವಾಮಿ, ನಿಧಿ, ನಾರಾಯಣ್ ಹಾಗೂ ಇತರರು ಹಾಜರಿದ್ದರು.



## ನಿಟುವಳ್ಳಿಯ ಶ್ರೀ ಕರಿಯಾಂಬಿಕಾ ದೇವಿ ಜಾತ್ರಾ ಮಹೋತ್ಸವದಲ್ಲಿ ಇಂದು

ದಾವಣಗೆರೆ - ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನಿಂದ ಇಂದಿನಿಂದ ಬರುವ ಮೇ 3 ರವರೆಗೆ ಶ್ರೀ ಕರಿಯಾಂಬಿಕಾ ದೇವಿಯ ಜಾತ್ರಾ ಮಹೋತ್ಸವ ನಡೆಯಲಿದೆ. ಇಂದು ಶ್ರೀ ಅಮ್ಮನವರ ವಿಶೇಷ ಅಲಂಕಾರ, ಉಡಿ ತುಂಬುವ ಕಾರ್ಯಕ್ರಮ ಮತ್ತು ಮಹಾಪೂಜೆ ಇದೆ. ನಾಳೆ ಬುಧವಾರ ಶ್ರೀ ಅಮ್ಮನವರ ದೊಡ್ಡಜಾತ್ರೆ ನಡೆಯಲಿದೆ.

# ಬಡವರ ಮಕ್ಕಳು ಉನ್ನತ ಹುದ್ದೆಗೆ ಹೋಗುವಂತಹ ಬದಲಾವಣೆ ತರಬೇಕೆಂಬ ಗುರಿ ನನ್ನದು : ವಿನಯ್



ಜಗಳೂರು, ಏ. 29 - ಎಸ್ಸೆಸ್ಸೆಲ್ಸಿ, ಪಿಯುಸಿ ಸೇರಿದಂತೆ ವಿದ್ಯಾರ್ಥಿಗಳು ಅರ್ಧಕ್ಕೆ ವಿದ್ಯಾಭ್ಯಾಸ ಮೊಟಕುಗೊಳಿಸುವುದು ಬಡತನವೇ. ಓದಿಗೆ ತಕ್ಕಂತೆ ಕೆಲಸಕ್ಕೆ ಸೇರುತ್ತಾರೆ. ಬಡವರ ಮಕ್ಕಳು ಉನ್ನತ ಹುದ್ದೆಗೆ ಹೋಗಬೇಕು. ಈ ಬದಲಾವಣೆ ತರಬೇಕು ಎಂಬುದು ನನ್ನ ಆಸೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ತಿಳಿಸಿದರು.

ಜಗಳೂರು ತಾಲ್ಲೂಕಿನ ಲಕ್ಕಂಪುರ ಗ್ರಾಮದಲ್ಲಿ ಮತಯಾಚನೆ ಮಾಡಿದ ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ಮಕ್ಕಳು ಉನ್ನತ ಶಿಕ್ಷಣ ಪಡೆದು ಭವಿಷ್ಯದಲ್ಲಿ ರಾಷ್ಟ್ರೀಯ ನಾಯಕರಾಗಬೇಕು. ದೊಡ್ಡ ಕನಸು ನನಸಾಗಿಸುವ ವ್ಯವಸ್ಥೆ ಹುಟ್ಟು ಹಾಕಬೇಕು. ಈ ಹೋರಾಟ ಈಗ ಶುರುವಾಗಿದೆ. ನನ್ನನ್ನು ಗೆಲ್ಲಿಸಿದ್ದೇ ಆದರೆ ದಾವಣಗೆರೆ ಮಾತ್ರವಲ್ಲ, ಭಾರತದ ದೇಶದಲ್ಲಿ ಐತಿಹಾಸಿಕ ಘಟನೆ ಆಗುತ್ತದೆ ಹೇಳಿದರು. ದೈತ್ಯವಾಗಿ ಬೆಳೆದವರು ಸ್ವಲ್ಪ ಪ್ರಮಾಣದಲ್ಲಿ ಕೆಲಸ ಮಾಡಲು ಶುರು ಮಾಡುತ್ತಾರೆ. ಪಕ್ಷೇತರ ನಿಂತು ಗೆದ್ದಾಗ ಅಭಿವೃದ್ಧಿ ಜನರನ್ನು ಹುಡುಕಿಕೊಂಡು ಬರುತ್ತದೆ. ದಾವಣಗೆರೆ ರಾಜಕಾರಣ ಮುಕ್ತವಾಗಿರಲಿ, ಹೊಸಬರಿಗೆ ಅವಕಾಶ ಸಿಗಲಿ, ಧೈರ್ಯ ಬರಲಿ ಎಂಬ ಕಾರಣಕ್ಕೆ ಹೋರಾಟ ನಡೆಸುತ್ತಿದ್ದೇನೆ ಎಂದು ತಿಳಿಸಿದರು.

ದೈತ್ಯವಾಗಿ ಬೆಳೆದವರಿಗೂ ವಿನಯತೆ ಬರಲಿ. ಸಾಮಾಜಿಕ ಕಳಕಳಿ ಮನಸ್ಸಲ್ಲಿ ಮತ್ತೊಮ್ಮೆ ಮೂಡಲಿ. ಬರಗಾಲ ಇಲ್ಲದಿದ್ದರೂ ಬಡತನ ಇನ್ನೂ ಇದೆ. ಇದಕ್ಕೆ ಹೊಂದಿಕೊಂಡು ಬದುಕುತ್ತಿದ್ದೇವೆ. ಮಕ್ಕಳು ಶಾಲೆ ಬಿಟ್ಟರೂ ತಲೆಕೆಡಿಸಿಕೊಳ್ಳುವುದಿಲ್ಲ. ಅಷ್ಟರ ಮಟ್ಟಿಗೆ ನಾವು ಬದುಕುತ್ತಿದ್ದೇವೆ. ಇದೂ ಸಹ ಬಡತನ ಎಂದು ಹೇಳಿದರು.

ನಾನು ಪಕ್ಷೇತರನಾಗಿ ಕಣಕ್ಕಿಳಿಯುವುದಾಗಿ ಘೋಷಿಸಿದ ಮೇಲೆ ಶಾಲೆ, ಆಸ್ಪತ್ರೆ ಸೇರಿದಂತೆ ಜನರ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಲು ಹಾಗೂ ಪರಿಹರಿಸಲು ಮುಂದಾಗುತ್ತಿರುವುದು ಕಂಡು ಬರುತ್ತಿದೆ. ಜನರೊಟ್ಟಿಗೆ ಸೌಜನ್ಯವಾಗಿ ಮಾತನಾಡುತ್ತಾರೆ. ಗೇಟ್ ಒಳಗೂ ಬಿಟ್ಟುಕೊಳ್ಳುತ್ತಾರೆ. ಇದು ಪ್ರಜಾಪ್ರಭುತ್ವದ ಗೆಲುವು. ಘಟಾನುಘಟಿಗಳನ್ನು ಎದುರಿಸಿ ಸ್ಪರ್ಧಿಸುವುದು ಸಾಮಾನ್ಯ ಮಾತಲ್ಲ. ಹೆದರಿದ್ದಕ್ಕೆ ಹಳ್ಳಿ ಹಳ್ಳಿಗೆ ಭೇಟಿ ನೀಡುತ್ತಿದ್ದಾರೆ. ಹಿಂದಿನ ಚುನಾವಣೆಯಲ್ಲಿ ತಾಲ್ಲೂಕು, ಹಳ್ಳಿಗಳಿಗೆ ಬಂದು ರೋಡ್ ಶೋ ಮಾಡುತ್ತಿರಲಿಲ್ಲ. ಈಗ ಬರುತ್ತಿದ್ದಾರೆ. ಇದು ಪ್ರಜಾಪ್ರಭುತ್ವದ ಚಿಕ್ಕ ಗೆಲುವು ಎಂಬುದು ಜನರ ಭಾವನೆ ಎಂದರು.

# 17ನೇ ವಾರ್ಡಿನಲ್ಲಿ ದಿನೇಶ್ ಶೆಟ್ಟಿ ನೇತೃತ್ವದಲ್ಲಿ ಪ್ರಭಾ ಪರ ಪ್ರಚಾರ



ದಾವಣಗೆರೆ, ಏ. 29- ಚುನಾವಣೆ ಪ್ರಯುಕ್ತ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ 17ನೇ ವಾರ್ಡಿನಲ್ಲಿ ದಿನೇಶ್ ಕೆ. ಶೆಟ್ಟಿ ಅವರ ನೇತೃತ್ವದಲ್ಲಿ ಮನೆ ಮನೆ ಮತಯಾಚನೆ ಮಾಡಿ ಚುನಾವಣಾ ಪ್ರಚಾರ ನಡೆಸಲಾಯಿತು.

## ನಗರದಲ್ಲಿ ಇಂದು ಪಂಚಮಸಾಲಿ ಸಮಾಜದ ಕಾಂಗ್ರೆಸ್ ಬೆಂಬಲಿತರ ಸಭೆ

ದಾವಣಗೆರೆ, ಏ. 29- ನಾಳೆ ದಿನಾಂಕ 30ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಕಾಂಗ್ರೆಸ್ ಪಂಚಮಸಾಲಿ ಸಮಾಜದ ಕಾಂಗ್ರೆಸ್ ಬೆಂಬಲಿತ ಮುಖಂಡರ ಸಭೆ ನಡೆಯಲಿದೆ ಎಂದು ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ದಾಸೋಹ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚು ಸಮಾಜದ ಮುಖಂಡರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಹೇಳಿದರು. ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿಯವರು ಯಾವುದೇ ಪಕ್ಷವನ್ನು ಬೆಂಬಲಿಸಿ ಹೇಳಿಕೆ ನೀಡಿಲ್ಲ. ಸಮಾಜಕ್ಕೆ ಅನ್ಯಾಯವಾಗಿದ್ದರಿಂದ ಸಮಾಜದ ಪರವಾಗಿ ಮಾತನಾಡಿದ್ದಾರೆ ಎಂದು ಹೇಳಿದರು.

ಮುಖಂಡ ಹೆಚ್.ಎಸ್. ನಾಗರಾಜ್, ಪಂಚಮಸಾಲಿ ಸಮಾಜದ ಅಭಿವೃದ್ಧಿಗಾಗಿ ಕಾಂಗ್ರೆಸ್ ಬೆಂಬಲಿಸಬೇಕಿದೆ ಎಂದರು. ಹಿಂದಿನ ಸಂಸದರ ಗೆಲುವಿನಲ್ಲಿ ನಮ್ಮ ಸಮಾಜದ ಕೊಡುಗೆ ಇತ್ತು. ಆದರೆ ಸಂಸದರು ಸಮಾಜಕ್ಕೆ ಯಾವುದೇ ರೀತಿಯ ಅನುಕೂಲ ಮಾಡಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಗುತ್ತೂರು ಹಾಲೇಶ್ ಗೌಡ್ರು, ಬೇಲೂರು ಅಜ್ಜಪ್ಪ, ಕಾಯಿಪೇಟೆ ಹಾಲೇಶ್ ಹಾಗೂ ಇತರರಿದ್ದರು.

## ರುದ್ರಾಂಬ ಪ್ರಕಾಶ್ ನಿಧನಕ್ಕೆ ಎಸ್ಸೆಸ್-ಎಸ್ಸೆಸ್ಸೆಂ ಸಂತಾಪ



ದಾವಣಗೆರೆ, ಏ. 29 - ಮಾಜಿ ಸಚಿವ ದಿ. ಎಂ.ಪಿ.ಪ್ರಕಾಶ್ ಅವರ ಧರ್ಮಪತ್ನಿ ಶ್ರೀಮತಿ ರುದ್ರಾಂಬ ಎಂ.ಪಿ.ಪ್ರಕಾಶ್ (ಹರಪನಹಳ್ಳಿ ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ್ ಅವರ ತಾಯಿ) ಅವರ ನಿಧನಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಲೋಕಸಭಾ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ರುದ್ರಾಂಬ ಅವರಿಗೆ ಬಾ.ಮ. ಶೋಕ

ದಾವಣಗೆರೆ. ಏ. 29 - ಮಾಜಿ ಉಪಮುಖ್ಯಮಂತ್ರಿ ದಿ. ಎಂ. ಪಿ. ಪ್ರಕಾಶ್ ಧರ್ಮಪತ್ನಿ ಶ್ರೀಮತಿ ಎಂ.ಪಿ. ರುದ್ರಾಂಬ ಅವರ ನಿಧನಕ್ಕೆ ಹಿರಿಯ ಸಾಹಿತಿಯೂ ಆಗಿರುವ ಎಂ.ಪಿ.ಪ್ರಕಾಶ್ ಅವರ ಕುಟುಂಬದ ಆಪ್ತ ಒಡನಾಡಿ ಬಾ.ಮ. ಬಸವರಾಜಯ್ಯ ಶೋಕ ವ್ಯಕ್ತಪಡಿಸಿದ್ದಾರೆ.


## ನಾಗನಗೌಡ್ರು ಜಯಮ್ಮ ನಿಧನ



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾ।। ಯು. ಬೇವಿನಹಳ್ಳಿ ಗ್ರಾಮದ ವಾಸಿ ನಾಗನಗೌಡರ ದಿ. ಲಿಂಗನಗೌಡ್ರು ಧರ್ಮಪತ್ನಿ

**ಶ್ರೀಮತಿ ನಾಗನಗೌಡ್ರು ಜಯಮ್ಮ**

ಇವರು ದಿನಾಂಕ 29.04.2024ರ ಸೋಮವಾರ ರಾತ್ರಿ 9.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.04.2024ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ಯು. ಬೇವಿನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ನಾಗನಗೌಡ್ರು ವಂಶಸ್ಥರು,** ಯು. ಬೇವಿನಹಳ್ಳಿ,

**ಮೊ : 99642 29491**

## ಹತ್ತನೇ ವರ್ಷದ ಪುಣ್ಯಸ್ಮರಣೆ



**ಸೋಮಶೇಖರ್ ಬಿ. ಪಾಟೀಲ್**

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಅಜಯ್ ಬಿ. ಪಾಟೀಲ್ ಮತ್ತು ಕುಟುಂಬ ವರ್ಗದವರು, ಪಾಟೀಲ್ ವಂಶಸ್ಥರು**

**ಎಂ.ಎಂ. ಫಾರ್ಮಾಟೆಕ್, ದಾವಣಗೆರೆ.**

**ಎಂ.ಎಂ. ಮೆಡಿಕೇರ್, ದಾವಣಗೆರೆ.**


## ದೇವರಬೆಳಕರೆ ಲಕ್ಷ್ಮಮ್ಮ ನಿಧನ



ದೇವರಬೆಳಕೆರೆ ಗ್ರಾಮದ ವಾಸಿ ದಿ. ಕರುಬರ ರೇವಣಪ್ಪನವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಮ್ಮ ಇವರು ದಿನಾಂಕ 29.04.2024ರ ಮಧ್ಯಾಹ್ನ 3.05ಕ್ಕೆ ನಿಧನರಾದರು. ಐವರು ಪುತ್ರರು, ಇಬ್ಬರು ಪುತ್ರಿಯರು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.04.2024ರ ಮಂಗಳವಾರ ಬೆಳಿಗ್ಗೆ 10.40ಕ್ಕೆ ನೆರವೇರಲಿದೆ.

**ಮತದಾನ ಎಲ್ಲರ ಹಕ್ಕು**

# ಪಂಚ ಜನ ಕಲ್ಯಾಣ ಯೋಜನೆ ಕೈ ಗೆಲುವಿಗೆ ಶ್ರೀರಕ್ಷೆ : ಹೆಚ್. ಆಂಜನೇಯ



ದಾವಣಗೆರೆ, ಏ. 29- ಸಿದ್ದರಾಮಯ್ಯ ಸರ್ಕಾರದ ಪಂಚ ಜನ ಕಲ್ಯಾಣ ಯೋಜನೆಗಳು ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಕಾರಣವಾಗಲಿದೆ ಎಂದು ಮಾಜಿ ಸಚಿವ ಹೆಚ್.ಆಂಜನೇಯ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಸಮರ್ಥ ಅಭ್ಯರ್ಥಿಯಾಗಿದ್ದು, ಅವರು ಒಂದು ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಹೇಳಿದರು. ಕಳೆದ ಮೂರು ದಿನಗಳಿಂದ ತಾವು ಅಭ್ಯರ್ಥಿ ಪರ ಪ್ರಚಾರ ಮಾಡುತ್ತಿದ್ದು, ಎಲ್ಲೆಡೆ ಉತ್ತಮ ಒಲವು ವ್ಯಕ್ತವಾಗುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಭರವಸೆಗಳನ್ನು ಈಡೇರಿಸದೇ ವಚನ ಭ್ರಷ್ಟರಾಗಿದ್ದಾರೆ. ಬಡವರ ಹಾಗೂ ರೈತರ ಕಣ್ಣೀರು ಒರೆಸುವ ಕೆಲಸ ಮಾಡದೆ, ದೊಡ್ಡ ಮಾಲೀಕರ ಪರವಾಗಿದ್ದಾರೆ. ಸಾಮಾಜಿಕ ನ್ಯಾಯದ ಪರಿಚಯವಾಗಲೀ ಸಮಾನತೆಯ ಅರಿವಾಗಲೀ ಅವರಿಗಿಲ್ಲ ಎಂದು ಆರೋಪಿಸಿದರು.

ಬಿಜೆಪಿಯವರು ದೇವರು-ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವುದು ಸಾಕು. ಬಡವರಿಗೆ ತಿನ್ನಲು ಅನ್ನ ಬೇಕಿದೆ ಎಂದ ಅವರು, ಸಮಾನತೆ, ಸಹಬಾಳ್ವೆ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದರು.

ನಿಧನರಾದ ಕೇಂದ್ರದ ಮಾಜಿ ಸಚಿವ, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ಅಪ್ರತಿಮ, ಶ್ರೇಷ್ಠ, ಸ್ವಾಭಿಮಾನಿ ರಾಜಕಾರಣಿ ಎಂದು ಇದೇ ವೇಳೆ ಹೇಳಿದ ಆಂಜನೇಯ, ಅವರ ಅಗಲಿಕೆಯಿಂದ ಶೋಷಿತ ಸಮುದಾಯಕ್ಕೆ ನೋವುಂಟಾಗಿದೆ. ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರುಗಳಾದ ಬಿ.ಹೆಚ್. ವೀರಭದ್ರಪ್ಪ, ಎಲ್.ಡಿ. ಗೋಣೆಪ್ಪ, ಎನ್. ನೀಲಗಿರಿಯಪ್ಪ, ಎಸ್. ಮಲ್ಲಿಕಾರ್ಜುನ್, ಹೆಚ್. ಉದಯಕುಮಾರ್, ಪಿ.ರಮೇಶ್, ಚಿರಂಜೀವಿ, ಕುಮಾರ್, ಶಂಕರ್, ಉಚ್ಚೆಂಗಪ್ಪ, ವೆಂಕಟೇಶ್ ಇತರರಿದ್ದರು.

# ಮದುವೆ ಊಟ ಸೇವಿಸಿ ಅಸ್ವಸ್ಥ: ಆಸ್ಪತ್ರೆಗೆ ಸಿದ್ದೇಶ್ವರ ಭೇಟಿ



ದಾವಣಗೆರೆ, ಏ.29- ಹರಪನಹಳ್ಳಿ ತಾಲ್ಲೂಕಿನ ಸಿಂಗ್ರಿಹಳ್ಳಿ ತಾಂಡದಲ್ಲಿ ಮದುವೆ ಊಟ ಸೇವಿಸಿ ಅಸ್ವಸ್ಥಗೊಂಡು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದ ಅಸ್ವಸ್ಥರನ್ನು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಇಂದು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. 96 ಕ್ಕೂ ಹೆಚ್ಚು ಅಸ್ವಸ್ಥರಲ್ಲಿ 22 ಮಕ್ಕಳು ಇದ್ದರು. ಅವರ ಆರೋಗ್ಯ ವಿಚಾರಿಸಿ, ಅವರಿಗೆ ಯಾವುದೇ ಸಮಸ್ಯೆ ಆಗದಂತೆ ಚಿಕಿತ್ಸೆ ನೀಡಲು ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಜೊತೆಯಲ್ಲಿದ್ದರು.

# ಐದು ದಿನಗಳ ಹಿಂದಷ್ಟೇ ಇಂದೋರ್‌ನ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಹತ್ಯೆ ಯತ್ನ ಪ್ರಕರಣ

ಇಂದೋರ್, ಏ. 29 – ನಾಮಪತ್ರ ವಾಪಸ್ ಪಡೆದುಕೊಂಡ ಮಧ್ಯ ಪ್ರದೇಶದ ಇಂದೋರ್‌ನ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಐದು ದಿನಗಳ ಹಿಂದಷ್ಟೇ ಹತ್ಯೆ ಯತ್ನ ಪ್ರಕರಣ ದಾಖಲಿಸಲಾಗಿತ್ತು.

17 ವರ್ಷಗಳ ಬಳಿಕ ಭೂಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಹತ್ಯೆ ಯತ್ನ ಪ್ರಕರಣವನ್ನೂ ಸೇರ್ಪಡೆ ಮಾಡಲಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಬಾಮ್ ವಿರುದ್ಧ ಹತ್ಯೆ ಯತ್ನ ಪ್ರಕರಣ ದಾಖಲಿಸುವಂತೆ ಯೂನಸ್ ಪಟೇಲ್ ಎಂಬುವವರು ಏಪ್ರಿಲ್ 5ರಂದು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಬಳಿ ಮನವಿ ದಾಖಲಿಸಿದ್ದರು. ಏಪ್ರಿಲ್ 24ರಂದು ಇದಕ್ಕೆ ಮ್ಯಾಜಿಸ್ಟ್ರೇಟರು ಸಮ್ಮತಿ ನೀಡಿದ್ದರು.

ಅಕ್ಷಯ್ ಬಾಮ್, ಅವರ ತಂದೆ ಕಾಂತಿಲಾಲ್ ಬಾಮ್ ಹಾಗೂ ಇತರರ ವಿರುದ್ಧ ಹತ್ಯೆ ಯತ್ನ ಪ್ರಕರಣದ ಸೇರ್ಪಡೆಗಾಗಿ ನ್ಯಾಯಾಲಯ ನಿರ್ದೇಶನ ನೀಡಿತ್ತು.

ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಪಟೇಲ್ ಅವರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಅಕ್ಟೋಬರ್ 4, 2007ರಂದು ಬಾಮ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಈ ಹಲ್ಲೆ ವೇಳೆ ಭದ್ರತಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸತ್ವೀರ್ ಸಿಂಗ್ ಎಂಬಾತ ಕಾಂತಿಲಾಲ್ ಸೂಚನೆಯ ಮೇರೆಗೆ ತಮ್ಮ ಮೇಲೆ ಗುಂಡು ಹಾರಿಸಿದ್ದ ಎಂದು ಯೂನಸ್ ದೂರಿದ್ದರು. ಸತ್ವೀರ್ ಸಿಂಗ್ ಸಾವನ್ನಪ್ಪಿದ್ದಾರೆ. ಪ್ರಕರಣದ ಇಬ್ಬರಾದ ಸೋಹನ್ ಹಾಗೂ ಮನೋಜ್ ಕಣ್ಮರೆಯಾಗಿದ್ದಾರೆ. 2007ರಲ್ಲಿ ಪೊಲೀಸರು ಘಟನಾ ಸ್ಥಳದಿಂದ ಬಂದೂಕು ಹಾಗೂ ಖಾಲಿ ಗುಂಡುಗಳನ್ನು ವಶಪಡಿಸಿಕೊಂಡಿದ್ದರು.

# ಆಫ್ಘಾನ್‌ಗೆ ಹಸ್ತಾಂತರ, ಪಾಕಿಸ್ತಾನಕ್ಕೆ ನುಸುಳು ಮಾರ್ಗ





## 17 ಲಕ್ಷ ಅಕ್ರಮ ವಲಸಿಗರಿಗೆ ತೀವ್ರವಾಗುತ್ತಿರುವ ಸಂಕಷ್ಟ

ಕರಾಚಿ, ಏ. 29 - ಸುಮಾರು ಐವತ್ತು ವರ್ಷಗಳ ಹಿಂದೆ ಆಫ್ಘಾನಿಸ್ತಾನದಿಂದ ಪಕ್ಕದ ಪಾಕಿಸ್ತಾನಕ್ಕೆ ಪಲಾಯನ ಮಾಡಿದ್ದ ದಂಪತಿಗೆ ಜನಿಸಿದ 18 ವರ್ಷದ ಮಗ, ಈಗ ಅತಂತ್ರವಾಗಿದ್ದಾರೆ. ಅವರ ಹಣ, ಫೋನ್ ಹಾಗೂ ಮೋಟರ್‌ಬೈಕ್ ಕಸಿದುಕೊಂಡು ಕರಾಚಿ ಪೊಲೀಸರು, ಹಸ್ತಾಂತರ ಕೇಂದ್ರಕ್ಕೆ ರವಾನಿಸಿದ್ದಾರೆ.

ಮೂರು ದಿನಗಳ ಅತಂತ್ರ ಪರಿಸ್ಥಿತಿ ನಂತರ ಯುವಕನನ್ನು ಆಫ್ಘಾನಿಸ್ತಾನಕ್ಕೆ ರವಾನಿಸಿದ್ದಾರೆ. ಯುವಕ ಜೀವನದಲ್ಲಿ ಎಂದೂ ಆಫ್ಘಾನಿಸ್ತಾನವನ್ನೇ ನೋಡಿಲ್ಲ. ಈಗ ಆತನ ಬಳಿ ಬಟ್ಟೆಗಳನ್ನು ಹೊರತು ಪಡಿಸಿದರೆ ಬೇರೇನೂ ಇಲ್ಲ.

ಈ ಯುವಕ ಸೇರಿದಂತೆ ಕನಿಷ್ಠ 17 ಲಕ್ಷ ಆಫ್ಘಾನ್ ಜನರು ಪಾಕಿಸ್ತಾನವನ್ನು ತಮ್ಮ ಮನೆ ಮಾಡಿಕೊಂಡಿದ್ದಾರೆ. ದಶಕಗಳ ಸಮರದಿಂದ ಆಫ್ಘಾನಿಸ್ತಾನ ಬಳಲುತ್ತಿರುವುದರಿಂದ, ಪಾಕಿಸ್ತಾನಕ್ಕೆ ವಲಸೆ ಬರುವವರ ಸಂಖ್ಯೆಯೂ ಹೆಚ್ಚಾಗಿದೆ. ಆದರೆ, ಇವರು ಯಾವುದೇ ಕಾನೂನು ಬದ್ಧ ಅನುಮತಿ ಪಡೆದಿಲ್ಲ. ಅಕ್ರಮ ವಲಸಿಗರ ವಿರುದ್ಧ ಪಾಕಿಸ್ತಾನ ತೆಗೆದುಕೊಳ್ಳುತ್ತಿರುವ ಕ್ರಮದಿಂದ ಇವರು ತತ್ತರಿಸಿದ್ದಾರೆ.

ಕಳೆದ ವರ್ಷ ಅಕ್ಟೋಬರ್ ನಂತರ ಸುಮಾರು 6 ಲಕ್ಷ ಆಫ್ಘಾನಿಸ್ತಾನೀಯರು ತಮ್ಮ ದೇಶಕ್ಕೆ ಮರಳಿದ್ದಾರೆ. ಇನ್ನೂ ಹತ್ತು ಲಕ್ಷ ಜನರು ಪಾಕಿಸ್ತಾನದಲ್ಲಿ ಅಡಗಿಕೊಂಡಿದ್ದಾರೆ. ಅವರು ತಮ್ಮ ಉದ್ಯೋಗ ತೊರೆದಿದ್ದಾರೆ, ತಾವಿರುವ ತಾಣಗಳಿಂದ ಹೊರ ಬರುವುದನ್ನೂ ಕಡಿಮೆ ಮಾಡಿದ್ದಾರೆ.

ಹಣ ಗಳಿಸುವುದು, ಬಾಡಿಗೆಗೆ ಮನೆ ಪಡೆಯುವುದು, ಆಹಾರ ಇಲ್ಲವೇ ಔಷಧಿ ಪಡೆಯುವುದೂ ಕಠಿಣವಾಗಿದೆ. ಯಾವ ಕ್ಷಣದಲ್ಲಾದರೂ ಪಾಕಿಸ್ತಾನದ ಪೊಲೀಸರು ಇವರನ್ನು ಹಿಡಿದು ಹಸ್ತಾಂತರಿಸಬಹುದಾಗಿದೆ.

ಹಲವರು ಪಾಕಿಸ್ತಾನದ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದಾರಾದರೂ, ಅನುಮತಿ ದೊರೆಯುವುದು ಕಠಿಣವಾಗಿದೆ. ಪಾಕಿಸ್ತಾನದ ವಲಸಿಗರಿಗೆ ಇಲ್ಲವೇ ಅವರ ಮಕ್ಕಳಿಗೆ ಪಾಕ್ ಸರ್ಕಾರ ಅನುಮತಿ ನೀಡುತ್ತಿಲ್ಲ.

ನಾನು ಹುಟ್ಟಿ ಬೆಳೆದಿದ್ದೇ ಇಲ್ಲಿ. ಆಫ್ಘಾನಿಸ್ತಾನದಲ್ಲಿ ಸ್ನೇಹಿತರಾಗಲೀ, ಕುಟುಂಬವಾಗಲೀ ಇಲ್ಲ. ಆದರೂ, ಇಲ್ಲಿಗೆ ಹಸ್ತಾಂತರಿಸಲಾಗಿದೆ. ಪರಿಸ್ಥಿತಿ ತಿಳಿಯಾದ ನಂತರ ಪಾಕಿಸ್ತಾನಕ್ಕೆ ವಾಪಸ್ಸಾಗಲು ಬಯಸಿದ್ದೇನೆ ಎಂದು ಹಸ್ತಾಂತರಗೊಂಡ ಯುವಕನೋರ್ವ ಹೇಳಿದ್ದಾನೆ.

ಹೊಸ ಜೀವನ ಕಟ್ಟಿಕೊಳ್ಳಲು ಬಂದಿರುವ ಯುವಕನಿಗೆ ತಾಲಿಬಾನ್ ಅಧಿಕಾರಿಗಳು 2,500 ಆಫ್ಘಾನ್ ರೂಪಾಯಿ ನೀಡಿದ್ದಾರೆ. ಇದರ ಮೌಲ್ಯ ಸುಮಾರು 2,800 ರೂ. ಆಗಿದೆ. ಸದ್ಯಕ್ಕೆ ಈತ ಧಾರ್ಮಿಕ ಶಾಲೆಯಲ್ಲಿ ಉಳಿದುಕೊಂಡಿದ್ದಾನೆ.

ಇನ್ನು ಕೆಲವರು, ಆಫ್ಘಾನಿಸ್ತಾನಕ್ಕೆ ಹಸ್ತಾಂತರಗೊಂಡ ನಂತರ, ಅಕ್ರಮವಾಗಿ ಮತ್ತೆ ಪಾಕಿಸ್ತಾನಕ್ಕೆ ವಾಪಸ್ಸಾಗಿದ್ದಾರೆ. ಇವರೀಗ ಬಂಧನದ ಭೀತಿ ಎದುರಿಸುತ್ತಿದ್ದಾರೆ. ಆದರೂ, ತಾವು ಹುಟ್ಟಿ ಬೆಳೆದ ಊರು ಬಿಟ್ಟು ಹೋಗಲು ಮನಸ್ಸಿಲ್ಲದೇ, ಅಕ್ರಮ ಮಾರ್ಗ ಹಿಡಿಯುತ್ತಿದ್ದಾರೆ.

ಕರಾಚಿಯ ಸುತ್ತಲಿನ ಪ್ರದೇಶಗಳಲ್ಲಿ ಸಾವಿರಾರು ಆಫ್ಘಾನ್ ಜನ ಉಳಿದುಕೊಂಡಿದ್ದಾರೆ. ಇಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಆರೋಗ್ಯ ಸೇವೆ ಇಲ್ಲವೇ ಶಿಕ್ಷಣವಿಲ್ಲ.

ಆಫ್ಘಾನಿಸ್ತಾನದಿಂದ ಬಂದ ಹಲವಾರು ಕುಟುಂಬಗಳು ಹಲವು ಪೀಳಿಗೆಗಳಿಂದ ಇಲ್ಲಿವೆ. ಆದರೆ, ಯಾವುದೇ ದಾಖಲೆಗಳನ್ನು ಹೊಂದಿಲ್ಲ. ಇವಿಲ್ಲದೇ ಪಾಕಿಸ್ತಾನದಲ್ಲಿ ಆರೋಗ್ಯ ಇಲ್ಲವೇ ಶಿಕ್ಷಣದ ಸೌಲಭ್ಯ ಪಡೆಯಲಾಗದು ಎಂದು ವಕೀಲೆ ಮೊನಿಜಾ ಕಾಕರ್ ಹೇಳಿದ್ದಾರೆ.

ಹಲವು ಕುಟುಂಬಗಳು 1980ರ ದಶಕದಲ್ಲೇ ಇಲ್ಲಿಗೆ ಬಂದಿದ್ದರು. ಆದರೆ, ಇದುವರೆಗೆ ಪಾಕಿಸ್ತಾನದ ಪೌರತ್ವ ದೊರೆತಿಲ್ಲ. ಅವರು ಬೇರೊಬ್ಬರ ಹೆಸರಿನಲ್ಲಿ ಬಾಡಿಗೆ ಮನೆ ಪಡೆದು ನೆಲೆಸಿದ್ದಾರೆ ಎಂದು ಕಾಕರ್ ಹೇಳಿದ್ದಾರೆ. ಇವರ ಮಕ್ಕಳು ಪಾಕಿಸ್ತಾನದಲ್ಲೇ ಹುಟ್ಟಿ ಬೆಳೆದರೂ ಯಾವುದೇ ದಾಖಲೆ ಹೊಂದಿಲ್ಲ. ಇವರ ಭವಿಷ್ಯ ಈಗ ಅತಂತ್ರವಾಗಿದೆ ಎಂದವರು ತಿಳಿಸಿದ್ದಾರೆ.

ಆಫ್ಘಾನಿಸ್ತಾನದ ಸಾಕಷ್ಟು ಜನರು ವಾಪಸ್ ತೆರಳಿದ್ದಾರೆ. ಹೀಗಾಗಿ ಅಂಗಡಿ ಹಾಗೂ ಮಾರುಕಟ್ಟೆಗಳು ಖಾಲಿಯಾಗಿವೆ ಎಂದು ಆಫ್ಘಾನ್ ರಾಯಭಾರಿ ಕಚೇರಿಯ ಮಾಧ್ಯಮ ಸಂಚಾಲಕ ಸೈಯದ್ ಹಬೀಬ್ ಉರ್ ರೆಹಮಾನ್ ಹೇಳುತ್ತಾರೆ.

ವಲಸೆ ಬಂದವರಲ್ಲಿ ಹಲವರು ಕೆಲಸಕ್ಕಾಗಿ ವಿದೇಶಗಳಿಗೆ ತೆರಳಿದ್ದಾರೆ. ಇನ್ನೂ ಕೆಲವರಿಗೆ ದಾಖಲೆಗಳನ್ನು ಪಡೆಯಲು ಸಮಯವಿಲ್ಲ. ಇನ್ನೂ ಕೆಲವರು ಪಾಕಿಸ್ತಾನ ನಮ್ಮನ್ನು ಎಂದೂ ಹೊರ ಹಾಕುವುದಿಲ್ಲ ಎಂದು ನಂಬಿದ್ದರು. ಹೀಗಾಗಿಯೇ ಸಾಕಷ್ಟು ಜನ ದಾಖಲೆಗಳನ್ನು ಪಡೆದಿಲ್ಲ ಎಂದು ರೆಹಮಾನ್ ಹೇಳಿದ್ದಾರೆ.

# ಮಾಯಕೊಂಡ ಕ್ಷೇತ್ರದಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಮತಯಾಚನೆ



ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಸವಾಪಟ್ಟಣ ಹಾಗೂ ತ್ಯಾವಣಗಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಮತಯಾಚನೆ ಮಾಡಲಿದ್ದಾರೆ.

ಬೆಳಗ್ಗೆ 9.30ಕ್ಕೆ ಕಾರಿಗನೂರು ಪಂಚಾಯಿತಿ ವ್ಯಾಪ್ತಿಯ ಕದರನಹಳ್ಳಿ, ಅರೇಹಳ್ಳಿ, ರಡ್ಡೇರ ಕ್ಯಾಂಪ್, 10ಕ್ಕೆ ಕತ್ತಲಗೆರೆ ಪಂಚಾಯಿತಿ ವ್ಯಾಪ್ತಿಯ ಕೆ. ಶೆಟ್ಟಿಹಳ್ಳಿ, ಕವಳಿತಾಂಡಾ, 10.30ಕ್ಕೆ ಬೆಳಲಗೆರೆ ವ್ಯಾಪ್ತಿಯ ರಡ್ಡಿಹಳ್ಳಿ, ಕುರುಬರಹಳ್ಳಿ, 11ಕ್ಕೆ ಕೋಟೆಹಾಳು ವ್ಯಾಪ್ತಿಯ ಮರಬನಹಳ್ಳಿ, ಹರೋಸಾಗರ, ಹರ್ಲೀಪುರ, ಸಂಗವಳ್ಳಿ, 11.30 ಕ್ಕೆ ಚಿರಡೋಣಿ, 12ಕ್ಕೆ ಕಂಸಾಗರ ವ್ಯಾಪ್ತಿಯ ಪುಣ್ಯಸ್ಥಳ, ಸಾಗರಪೇಟೆ, 1ಕ್ಕೆ ಕಣಿವೆಬಿಳಚಿ, ಕೆಂಗಾಪುರ, 1.30ಕ್ಕೆ ಬಸವಾಪಟ್ಟಣ, 2.30ಕ್ಕೆ ದಾಗಿನಕಟ್ಟೆ, ಯಲೋದಹಳ್ಳಿ, 3ಕ್ಕೆ ನಿಲೋಗಲ್, ಸಿದ್ದೇಶ್ ನಗರ, ಕಂಚುಗಾರನಹಳ್ಳಿ, ಗುಡ್ಡದಬೆನಕನಹಳ್ಳಿ, 3.30ಕ್ಕೆ ಗುಡ್ಡದ ಕೊಮಾರನಹಳ್ಳಿ, ಹಾಲೇಶ್ ಪುರ, ಮಧುರನಾಯಕನಹಳ್ಳಿ, ಮಲ್ಲಿಗೇನಹಳ್ಳಿ, 4ಕ್ಕೆ ರುದ್ರಾಪುರ, ಹೊಸಹಳ್ಳಿ, ಹೊಸನಗರ, 4.30ಕ್ಕೆ ಕಬ್ಬಳ ವ್ಯಾಪ್ತಿಯಲ್ಲಿ ಪ್ರಚಾರ ನಡೆಸಲಿದ್ದಾರೆ.

# ನಗರದಲ್ಲಿ ನಾಳೆ ವಿಶ್ವ ಕಾರ್ಮಿಕ ದಿನಾಚರಣೆ

ದಾವಣಗೆರೆ, ಏ. 29 - ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಎಐಟಿಯುಸಿ ದಾವಣಗೆರೆ ಜಿಲ್ಲಾ ಮಂಡಳಿಗಳ ನೇತೃತ್ವದಲ್ಲಿ ಮೇ 1ರಂದು ವಿಶ್ವ ಕಾರ್ಮಿಕ ದಿನಾಚರಣೆ ಆಚರಿಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಪಿ. ಬಸವನಗೌಡ ರಸ್ತೆ (ನಿಟುವಳ್ಳಿ ರಸ್ತೆಯ) ಎಸ್‌ಎಸ್‌ಪಿ. ಕಾಂಪ್ಲೆಕ್ಸ್ ಬಳಿಯಿಂದ ಕಾರ್ಮಿಕರ ಮೆರವಣಿಗೆ ನಡೆಯಲಿದೆ.

# ಚನ್ನಗಿರಿ ಕ್ಷೇತ್ರದಲ್ಲಿ ಇಂದು ಜಿ.ಬಿ.ವಿನಯ್ ಕುಮಾರ್ ಪ್ರಚಾರ



ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಚನ್ನಗಿರಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇಂದು ಮತ ಬೇಟೆ ನಡೆಸಲಿದ್ದಾರೆ. ರೋಡ್ ಶೋ ನಡೆಸಿ ಮತಯಾಚಿಸಲಿದ್ದಾರೆ.

ಬೆಳಿಗ್ಗೆ 8ಗಂಟೆಗೆ ಚನ್ನಗಿರಿ ತಾಲ್ಲೂಕಿನ ಮರಡಿ, 8.15ಕ್ಕೆ ತಣಿಗೆರೆ, 8.30ಕ್ಕೆ ಸಂತೇಬೆನ್ನೂರು, 9.15ಕ್ಕೆ ಚಿಕ್ಕಬೆನ್ನೂರು, 9. 45ಕ್ಕೆ ಚಿಕ್ಕ ಕೋಗಲೂರು, 10.15ಕ್ಕೆ ಹಿರೇ ಕೋಗಲೂರು, 11 ಗಂಟೆಗೆ ಮಲ್ಲಾಪುರ, 11.30ಕ್ಕೆ ಆಲೂರು, ಮಧ್ಯಾಹ್ನ 12ಕ್ಕೆ ಕೆರೆಬಿಳಚಿ, 12.45ಕ್ಕೆ ನಲ್ಲೂರು, 1.45ಕ್ಕೆ ದೇವರಹಳ್ಳಿ, 2.45ಕ್ಕೆ ನುಗ್ಗೇಹಳ್ಳಿ, 3.30ಕ್ಕೆ ನೀತಿಗೆರೆ, ಸಂಜೆ 4.15ಕ್ಕೆ ಹೊದಿಗೆರೆ, 4.30ಕ್ಕೆ ಬೆಂಕಿಕೆರೆ, 4.45ಕ್ಕೆ ಬೆಟ್ಟಕಡೂರು, 5ಕ್ಕೆ ಪಾಂಡೋಮಟ್ಟಿ, 5.30ಕ್ಕೆ ದುರ್ವಿಗೆರೆ, 6.15ಕ್ಕೆ ಮಲ್ಲೇಶ್ವರ, 6.30ಕ್ಕೆ ಗಂಗನಹಳ್ಳಿ, 6.45ಕ್ಕೆ ಬಿಡುಗೊಂಡನಹಳ್ಳಿ, ರಾತ್ರಿ 7ಕ್ಕೆ ಮಾವಿನಹೊಳೆ, 7.15ಕ್ಕೆ ಹೊನ್ನೆಬಾಗಿಲು, 7.30ಕ್ಕೆ ಚನ್ನಗಿರಿಯಲ್ಲಿ ವಿನಯ್ ಕುಮಾರ್ ಅವರು ಪ್ರಚಾರ ಕೈಗೊಳ್ಳಲಿದ್ದಾರೆ.

# ವಚನಾಮೃತ ಬಳಗದಿಂದ ಅಕ್ಕಮಹಾದೇವಿ ಜಯಂತಿ



ದಾವಣಗೆರೆ, ಏ. 29- ವಚನಾಮೃತ ಬಳಗದಿಂದ ಅಕ್ಕಮಹಾದೇವಿ ಜಯಂತ್ಯೋತ್ಸವ ಆಚರಿಸಲಾಯಿತು.

ನಾರಾಯಣ ಹೃದಯಾಲಯದ ಡಾ. ಗುರುರಾಜ್ ಮಾತನಾಡಿ, ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳ ಬಗ್ಗೆ ಬಳಗದ ಸದಸ್ಯರಿಗೆ ಹೆಚ್ಚಿನ ಅರಿವು ಮೂಡಿಸಿ, ಕೊಲೆಸ್ಟ್ರಾಲ್ ಕಂಟ್ರೋಲ್ ಬಗ್ಗೆ ಹಾಗೂ ಆಹಾರ ಪದ್ಧತಿಯ ಬಗ್ಗೆ ತಿಳಿಸಿದರು. ವಿನೋದ ಅಜಗಣ್ಣನವರ, ಮಮತಾ ನಾಗರಾಜ್ ಮಾತನಾಡಿದರು.

ಕಾರ್ಯಕ್ರಮದ ಆಯೋಜಕರಾದ ಸೌಮ್ಯ ಸತೀಶ್ ಧಾರವಾಡ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮ ದಲ್ಲಿ ನಮ್ಮ ವಚನ ಗುರುಗಳಾದ ರೇವಣಸಿದ್ದಪ್ಪ, ಪ್ರಮೀಳಾ ನಟರಾಜ್, ಗಾಯತ್ರಿ ಸುಭಾಷ್, ಮಧುಮತಿ ದೇವಿಗೆರೆ, ಶಾಂತ ಶಿವ ಶಂಕರ್, ಲತಾ ಕಪ್ಪಾಳಿ, ಸುಮಾ ಬೇತೂರು, ರೇಖಾ ಬೇತೂರು, ರಾಜಶ್ರೀ, ದೀಪಾ ಕಿರಣ್, ನಾಗರತ್ನ, ಕವಿತಾ, ಸುಮಾ ರಾಜು, ದೀಪ ದೇವರಾಜ್, ಜ್ಯೋತಿ ಬಾದಾಮಿ, ಸುಮಾ ಕೊಟ್ರೇಶ್, ಚಂದ್ರಿಕಾ ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

# ಮಹಿಳೆಯರ ಸಬಲೀಕರಣಕ್ಕೆ ಪ್ರಾಶಸ್ತ್ಯ: ಡಾ.ಪ್ರಭಾ





## ನವೋದಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಡಾ. ಪ್ರಭಾ ಅವರಿಗೆ ಮಹಿಳೆಯರ ಅಪಾರ ಬೆಂಬಲ

ದಾವಣಗೆರೆ,ಏ.29- ಕಾಂಗ್ರೆಸ್ ಪಕ್ಷ ಮೊದಲ ಬಾರಿಗೆ ಮಹಿಳೆಯರಿಗೆ ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಿನ ಅವಕಾಶ ಕಲ್ಪಿಸಿದ್ದು, ಇದೀಗ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೇ.50 ರಷ್ಟು ಮಹಿಳೆಯರಿಗೆ ಅವಕಾಶ ನೀಡಲಾಗಿದ್ದು, ಅದರಂತೆ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದೆ ಎಂದು ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ನವೋದಯ ಚಾರಿಟಬಲ್ ಟ್ರಸ್ಟ್ ವತಿಯಿಂದ ನಗರದ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಸಮುದಾಯ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್‌ಗೆ ಬೆಂಬಲ ಸೂಚಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷ ಮಹಿಳಾ ಸಬಲೀಕರಣಕ್ಕೆ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದ್ದು, ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಮಹಿಳೆಯರಿಗೆ ನೀಡಿದ ಆಶ್ವಾಸನೆಯನ್ನು ಈಡೇರಿಸಿದ್ದು, ಗೃಹಲಕ್ಷ್ಮಿ, ಶಕ್ತಿ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 1117 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ನಿಮ್ಮ ಸಹಕಾರದಿಂದ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಮಹಾಲಕ್ಷ್ಮಿ ಯೋಜನೆ ಮೂಲಕ ವಾರ್ಷಿಕ 1 ಲಕ್ಷ, ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಶೇ.50 ರಷ್ಟು ಮೀಸಲು ಸೇರಿದಂತೆ 5 ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದರು.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಮಾತನಾಡಿ, ಕಾಂಗ್ರೆಸ್ ಪಕ್ಷ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದ್ದು, ಇಂದು ಕರ್ನಾಟಕ ರಾಜ್ಯದಲ್ಲಿ 6 ಜನ ಮಹಿಳೆಯರಿಗೆ ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿಯನ್ನಾಗಿಸಿದೆ ಎಂದರು.

ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿರುವ ಆರೂ ಜನ ಮಹಿಳೆಯರು ಗೆಲುವು ಸಾಧಿಸುವರು ಎಂದು ಭವಿಷ್ಯ ನುಡಿದ ಅವರು, ಈ ಮಹಿಳೆಯರು ರಾಜ್ಯದ ಎಲ್ಲ ಮಹಿಳೆಯರ ಧ್ವನಿಯಾಗಿ ಕೆಲಸ ಮಾಡುವರು ಎಂದರು.

ಸಭೆಯ ನೇತೃತ್ವ ವಹಿಸಿದ್ದ ಡಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷರೂ ಆದ ಹಾಲಿ ನಿರ್ದೇಶಕ ಜೆ. ಆರ್.ಷಣ್ಮುಖಪ್ಪ ಮಾತನಾಡಿ, ಕಾಂಗ್ರೆಸ್‌ನ ಪ್ರಭಾ ಮಲ್ಲಿಕಾರ್ಜುನ್‌ಗೆ ಬೆಂಬಲ ಸೂಚಿಸಿ ಸುಮಾರು ಆರು ಸಾವಿರದಿಂದ ಏಳು ಸಾವಿರ ಜನ ಸೇರಿದ್ದಾರೆ. ಈ ಬಾರಿ ಕಾಂಗ್ರೆಸ್ ಜಯಭೇರಿ ಭಾರಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಹಿಳಾ ಅಭಿವೃದ್ಧಿ, ದಾವಣಗೆರೆ ಅಭಿವೃದ್ಧಿಗೆ ಪ್ರಭಾ ಮಲ್ಲಿಕಾರ್ಜುನ್ ಬೇಕಿದ್ದು, ಈ ಬಾರಿ ಅವರನ್ನು ಗೆಲ್ಲಿಸುವ ಮೂಲಕ ತ್ರಿಬಲ್ ಎಂಜಿನ್ ಸರ್ಕಾರ ರಚಿಸುತ್ತೇವೆ. ಎಸ್.ಎಸ್. ಮಲ್ಲಿಕಾರ್ಜುನ್ ಅವರ ಅಭಿವೃದ್ಧಿ ಕೆಲಸಗಳು ಕೈ ಹಿಡಿಯಲಿದ್ದು, ಜನತೆ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕೆಂದು ಹೇಳಿದರು.

ಶ್ರೀಮತಿ ಕಿರುವಾಡಿ ಗಿರಿಜಮ್ಮ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಚಿಕ್ಕಮಗಳೂರು ಶಾಸಕ ಡಿ.ಸಿ.ತಮ್ಮಣ್ಣ, ಕಾಂಗ್ರೆಸ್ ನಾಯಕರಾದ ಅಣಬೇರು ರಾಜಣ್ಣ, ಐಗೂರು ಚಂದ್ರಶೇಖರ್, ಕಲಪನಹಳ್ಳಿ ಸೋಮಶೇಖರಪ್ಪ, ಸಿಬ್ಬಂದಿಗಳಾದ ವೀಣಾ, ಮಮತಾ, ರೇಣುಕಾ, ಬಸಮ್ಮ ಸೇರಿದಂತೆ ಇತರರು ಇದ್ದರು.

# ಅಭಿವೃದ್ಧಿ ನೋಡಿ ಬಿಜೆಪಿಗೆ ಮತ ನೀಡಿ : ಗಾಯತ್ರಿ



## ಹೊನ್ನಾಳಿ ವಿಧಾನಸಭಾ ಕ್ಷೇತ್ರದಲ್ಲಿ ಮತ ಪ್ರಚಾರ

ಹೊನ್ನಾಳಿ, ಏ. 29- ಬಿಜೆಪಿ ಸರ್ಕಾರದ 10 ವರ್ಷಗಳ ಆಡಳಿತ, ಕಾಂಗ್ರೆಸ್ ಸರ್ಕಾರದ 60 ವರ್ಷಗಳ ಆಡಳಿತ ತುಲನೆ ಮಾಡಿ ಜನ ಬಿಜೆಪಿಯನ್ನು ಒಪ್ಪಿಕೊಂಡಿದ್ದಾರೆ. ದೇಶದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಭವಿಷ್ಯ ನುಡಿದರು.

ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹನುಮಸಾಗರ, ಎಚ್.ಗೋಪಗೊಂಡನಹಳ್ಳಿ, ಹತ್ತೂರು ಗ್ರಾಮಗಳಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ಇಡೀ ದೇಶದಲ್ಲಿ ಎನ್‌ಡಿಎ ಪರ, ಮೋದಿ ಜೀ ಪರ, ಅಭಿವೃದ್ಧಿ ಪರ ಅಲೆ ಇದೆ. ದಾವಣಗೆರೆಯಲ್ಲಿ ಈಗಾಗಲೇ ನಮ್ಮ ಗೆಲುವು ಖಚಿತವಾಗಿದೆ. ನಿನ್ನೆ ಮೋದಿ ಜೀ ಕಾರ್ಯಕ್ರಮಕ್ಕೆ ಬಂದಿದ್ದ ಜನಸ್ತೋಮ ನೋಡಿ ಕಾಂಗ್ರೆಸ್‌ಗೆ ನಡುಕ ಉಂಟಾಗಿದ್ದು, ಠೇವಣಿ ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಬರ ತಾಂಡವವಾಡುತ್ತದೆ. ಬರ ಪರಿಹಾರ ನೆಪದಲ್ಲಿ ಕಾಂಗ್ರೆಸ್ ಕೋಟಿ ಕೋಟಿ ಲೂಟಿ ಮಾಡುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಒಂದು ದಿನವೂ ಬರ ಪರಿಹಾರ ಸಭೆ ನಡೆಸಲಿಲ್ಲ, ಗ್ರಾಮೀಣ ಭಾಗಕ್ಕೆ ಹೋಗಿ ಜನರ ಸಂಕಷ್ಟ ಆಲಿಸಲಿಲ್ಲ. ಈಗ ಪತ್ನಿ ಅಭ್ಯರ್ಥಿ ಎಂದು ಊರು ಊರು ಸುತ್ತುತ್ತಿದ್ದಾರೆ. ಅದು ರಾಜಕೀಯಕ್ಕಾಗಿ ಬಿಟ್ಟರೆ ಜನರ ಸಂಕಷ್ಟ ಆಲಿಸಲು ಅಲ್ಲ. ರಾಜ್ಯದಲ್ಲಿ ನಮ್ಮ ಸರ್ಕಾರ ಇಲ್ಲದಿದ್ದರೂ ಬಿಜೆಪಿ ರಾಜ್ಯ ಘಟಕ ತಂಡ ತಂಡ ಮಾಡಿಕೊಂಡು ಗ್ರಾಮೀಣ ಭಾಗದಲ್ಲಿ ಬರ ಅಧ್ಯಯನ ಮಾಡಿದೆ. ಅದರಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ತಂಡದ ಸದಸ್ಯರಾಗಿ ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳ ಬರ ಅಧ್ಯಯನ ಮಾಡಿ ಕೇಂದ್ರಕ್ಕೆ ವರದಿ ಸಲ್ಲಿಸಿದ್ದಾರೆ. ಜನ ಇದನ್ನು ಮರೆಯಬಾರದು. ಈ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬುದ್ಧಿ ಕಲಿಸಬೇಕು ಎಂದರು.

ಮಾಜಿ ಸಚಿವ ಎಂ .ಪಿ.ರೇಣುಕಾಚಾರ್ಯ ಮಾತನಾಡಿ, ಕೇಂದ್ರದಲ್ಲಿ ಮೋದಿ, ದಾವಣಗೆರೆಯಲ್ಲಿ ಗಾಯತ್ರಿ ಸಿದ್ದೇಶ್ವರ ಎಂದು ಲೋಕಸಭಾ ಕ್ಷೇತ್ರದ ಜನ ತೀರ್ಮಾನ ಮಾಡಿದ್ದಾರೆ. ಆ ತೀರ್ಮಾನದ ಫಲಿತಾಂಶ ಜೂನ್ 7 ಕ್ಕೆ ಬರಲಿದೆ. ಅದು ಇಡೀ ಭಾರತ ದೀಪಾವಳಿ ಮಾಡಲಿದೆ. ಅದು ಇಡೀ ವಿಶ್ವವೇ ಮತ್ತೊಮ್ಮೆ ಭಾರತದ ಕಡೆ ತಿರುಗಿ ನೋಡುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಮೋದಿ ಜೀ ಪ್ರಧಾನಿಯಾದ ಮೇಲೆ ಆತಂಕವಾದಿಗಳಿಗೆ ಎಲ್ಲಿಯೂ ಅವಕಾಶ ಇಲ್ಲದಂತಾಗಿದೆ. ಹೀಗಾಗಿ ಪಿಎಫ್‌ಐ ಮತ್ತು ನಿಷೇಧಿತ ಸಂಘಟನೆಗಳು ಕಾಂಗ್ರೆಸ್ ಜೊತೆ ಕೈ ಜೋಡಿಸಿ ಕಾಂಗ್ರೆಸ್ ಅದನ್ನು ಅಧಿಕಾರಕ್ಕೆ ತರಲು ಪ್ರಯತ್ನಿಸುತ್ತಿವೆ. ಆತಂಕವಾದಿಗಳು ಮತ್ತೆ ಮುನ್ನೆಲೆಗೆ ಬಂದರೆ ಭಯೋತ್ಪಾದಕರ, ಮಾನವ ಬಾಂಬರ್‌ಗಳ, ಜಿಹಾದಿಗಳ ಅಟ್ಟಹಾಸ ಹೆಚ್ಚಾಗುತ್ತದೆ. ನಮ್ಮ ಮಕ್ಕಳಿಗೆ ಭವಿಷ್ಯ ಇಲ್ಲದಂತಾಗುತ್ತದೆ. ಇದನ್ನು ಪ್ರತಿಯೊಬ್ಬರೂ ಗಮನದಲ್ಲಿಟ್ಟುಕೊಂಡು ಬಿಜೆಪಿಗೆ ಮತ ಹಾಕಿಸಬೇಕು ಎಂದು ಕರೆ ನೀಡಿದರು.

ಮಂಡಲ ಅಧ್ಯಕ್ಷ ಸುರೇಶ್, ದ್ರಾಕ್ಷಾಯಿಣಿ ಸಂಗಮೇಶ್ ನಿರಾಣಿ, ಋತು, ಬಿಜೆಪಿ ಮುಖಂಡ ಮಹೇಶ್, ಶಾಂತರಾಜ್ ಪಾಟೀಲ್, ಕುಬೇರಪ್ಪ, ಸಂತೋಷ ಕುಮಾರ್, ಎಲ್.ಕೆ. ಮಂಜಪ್ಪ, ಹನುಮಂತಪ್ಪ, ಅರೆಕೆರೆ ನಾಗರಾಜ್, ರಂಗನಾಥ್, ಸುರೇಂದ್ರ, ಯೋಗೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಪನಹಳ್ಳಿ : ನೋವು-ನಲಿವುಗಳಿಗೆ ಸ್ಪಂದಿಸುವವರಿಗೆ ಮಾತ್ರ ಮತ ನೀಡಿ

## ಮತಯಾಚನೆ ಮಾಡಿದ ಪಕ್ಷೇತರ ಅಭ್ಯರ್ಥಿ ವಿನಯ್ ಕುಮಾರ್



ಹರಪನಹಳ್ಳಿ,ಏ.29- ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರು, ಹರಪನಹಳ್ಳಿ ತಾಲ್ಲೂಕಿನ ಜಂಬುಲಿಂಗನಹಳ್ಳಿಯಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಹರಪನಹಳ್ಳಿ ತಾಲೂಕಿನ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ನಿಮ್ಮ ಮನೆ ಮಗ ಎಂದುಕೊಂಡು ಅವಕಾಶ ಮಾಡಿಕೊಡಿ. ಅಭಿವೃದ್ಧಿ ಮಾಡಿ ತೋರಿಸಿದ ಬಳಿಕ ಮತ್ತೆ ನಿಮ್ಮ ಬಳಿ ಮತ ಕೇಳಲು ಬರುತ್ತೇನೆ ಎಂದರು.

ಅಭಿವೃದ್ಧಿ ಕನಸು, ಹೋರಾಡುವ ಶಕ್ತಿ ಇರುವವರಿಗೆ ಮತ ನೀಡಿ. ಅಭಿವೃದ್ಧಿ ಬಗ್ಗೆ ಚಿಂತಿಸುವವರು. ಕೈಗೆ ಸಿಗುವಂತವರು ಸಂಸದರಾಗಬೇಕು. ಜನ ಸೇವಕನಾಗಬೇಕೆಂಬ ಉದ್ದೇಶದಿಂದ ಮತಯಾಚನೆಗೆ ಬಂದಿದ್ದೇನೆ. ಬಿಜೆಪಿಯಿಂದ ಗಾಯತ್ರಿ ಸಿದ್ದೇಶ್ವರ, ಕಾಂಗ್ರೆಸ್ ನಿಂದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ತಂದಿದ್ದಾರೆ. ನಿಮ್ಮ ಸೇವೆ ಮಾಡಲು ಟಿಕೆಟ್ ತಂದಿದ್ದಾರೆಯೋ, ಇಲ್ಲವೋ ಅನ್ನೋದು ನೀವೇ ನಿರ್ಧರಿಸಿ. ನಿಮ್ಮ ಮುಂದೆ ಮೂರು ಅಭ್ಯರ್ಥಿಗಳಿದ್ದಾರೆ. ಮತ ಹಾಕಲು ಹೋದಾಗ ಆತ್ಮಸಾಕ್ಷಿಗನುಗುಣವಾಗಿ, ಯೋಚನೆ ಮಾಡಿ, ಸಂವಾದ ನಡೆಸಿ ನಿರ್ಧಾರ ಮಾಡಿ ಹಕ್ಕು ಚಲಾಯಿಸಿ. ಕಷ್ಟ, ಸುಖದಲ್ಲಿ ಭಾಗಿಯಾಗುವವರು, ನೋವು, ನಲಿವುಗಳಿಗೆ ಸ್ಪಂದಿಸುವವರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಮಾದರಿ ದಾವಣಗೆರೆ ಜಿಲ್ಲೆಯನ್ನಾಗಿಸಲು ಒಂದೇ ಒಂದು ಅವಕಾಶ ಕೊಡಿ ಎಂದು ಹೇಳಿದರು. ಈ ವೇಳೆ ಜಂಬುಲಿಂಗನಹಳ್ಳಿ ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜುನಾಥ ಸೇರಿದಂತೆ ಹಲವರು ಹಾಜರಿದ್ದರು.

**IN THE COURT HON'BLE 2nd ADDITIONAL CIVIL JUDGE & JMFC AT DAVANAGERE**

**O.S. No. 168/2015**

**Plantiffs :** Sri Revansiddappa & ORS., VERSES
**Defendents :** Smt. Parvatamma & ORS.,
**Defendant No. 3 (c)** Smt. Manjamma W/o Murugeshappa, Aged about 40 Years, R/o #19/21, 2nd Main, 5th Cross, Vinayaka Extension, Davanagere.

**SUIT SUMMONS UNDER ORDER - V RULE - 20 OF CPC**

Whereas plantiffs has filed the above suit against you peoples by seeking releif of injunction and also such other reliefs before the Hon'ble 2nd Additional Civil Judge & JMFC at Davanagere, in O.S. No. 168/2015 you defendantts No. 3(c) is hereby directed to appear in this court in persons or by advocate on 4.6.2024 for noon at 11.00 A.M. to defined yourself, failing which the suit will be heard and determined ex-parte.

Given under my hand and seal of this court on 28th day April 2024.

**KGK SWAMY, S.G Mahaveer**
Advocates `Law Solutions'
#417/4A, 4B, 1st Floor
Benaka Plaza, Dixith Road,
K.B Extension, Davanagere.

By order of court
**Chief Ministerial officer,**
PRINCIPAL CIVIL
JUDGE & JMFC,
DAVANAGERE.

# ಕಣದಿಂದ ಹಿಂದೆ ಸರಿದ ಕೈ ಅಭ್ಯರ್ಥಿ

## ಮಧ್ಯ ಪ್ರದೇಶದ ಇಂದೋರ್‌ನಲ್ಲಿ ನಾಮಪತ್ರ ವಾಪಾಸ್ ಪಡೆದ ಅಭ್ಯರ್ಥಿ ಅಕ್ಷಯ್ ಕಾಂತಿ ಬಾಮ್

ಇಂದೋರ್, ಏ. 29 - ಮಧ್ಯ ಪ್ರದೇಶದ ಇಂದೋರ್ ಲೋಕಸಭಾ ಕ್ಷೇತ್ರದ ಚುನಾವಣೆಗೆ ಎರಡು ವಾರಗಳಿರುವಂತೆಯೇ, ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಾಮ್ ಅವರು ನಾಮಪತ್ರ ವಾಪಸ್ ಪಡೆದಿದ್ದಾರೆ. ಅವರು ಬಿಜೆಪಿ ಸೇರುವ ಸಾಧ್ಯತೆ ಇದೆ.

ಹೊಸಬರಾದ ಅಕ್ಷಯ್ ಕಾಂತಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ಅವರು ಹಾಲಿ ಸಂಸದ ಬಿಜೆಪಿಯ ಶಂಕರ್ ಲಾಲ್‌ವಾನಿ ಅವರನ್ನು ಎದುರಿಸುತ್ತಿದ್ದರು. ಇಂದೋರ್ ಬಿಜೆಪಿಯ ಬಿಗಿ ಹಿಡಿತ ಇರುವ ಕ್ಷೇತ್ರವಾಗಿದೆ.

ಮೇ 13ರಂದು ಇಂದೋರ್ ಕ್ಷೇತ್ರದ ಚುನಾವಣೆ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಏಪ್ರಿಲ್ 29 ಕೊನೆಯ ದಿನ ವಾಗಿತ್ತು.

ಲೋಕಸಭಾ ಚುನಾವಣೆಗೆ ಮುಂಚೆ ಕಾಂಗ್ರೆಸ್‌ನ ಹಲವಾರು ಸ್ಥಳೀಯ ಮುಖಂಡರು ಬಿಜೆಪಿಗೆ ಸೇರ್ಪಡೆಯಾಗಿದ್ದರು. ನಂತರ ಅಕ್ಷಯ್ ಕಾಂತಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು.

ಈ ಬಗ್ಗೆ ದೆಹಲಿಯಲ್ಲಿ ಹೇಳಿಕೆ ನೀಡಿರುವ ಕಾಂಗ್ರೆಸ್, ಪ್ರಜಾಪ್ರಭುತ್ವಕ್ಕೆ ಬೆದರಿಕೆ ಇದೆ ಎಂದು ಆರೋಪಿಸಿದೆ. ಇದಕ್ಕೂ ಮುಂಚೆ ಗುಜರಾತ್‌ನ ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರ ತಿರಸ್ಕೃತಗೊಂಡಿದ್ದು, ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಲು ನೆರವಾಗಿತ್ತು. ಬಾಮ್ ಅವರು ಸ್ಥಳೀಯ ಬಿಜೆಪಿ ಶಾಸಕ ರಮೇಶ್ ಮೆಂಡೋಲ ಜೊತೆ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ತಮ್ಮ ನಾಮಪತ್ರ ವಾಪಸ್ ಪಡೆದಿದ್ದಾರೆ. ಮೆಂಡೋಲ ಅವರು ಮಧ್ಯ ಪ್ರದೇಶದ ಸಚಿವ ಕೈಲಾಶ್ ವಿಜಯವರ್ಗೀಯ ಅವರ ನಿಕಟವರ್ತಿ. ಈ ಕ್ಷೇತ್ರದಲ್ಲಿ 14 ಆಕಾಂಕ್ಷಿಗಳಿದ್ದರು. ಅವರ ಪೈಕಿ ಒಂಭತ್ತು ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ವಕ್ತಾರೆ ಸುಪ್ರಿಯ ಶ್ರೀನೇಟ್, ಈ ರೀತಿಯ ವಾತಾವರಣದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ಸಾಧ್ಯವಿಲ್ಲ. ನಮ್ಮ ಅಭ್ಯರ್ಥಿಗೆ ಬೆದರಿಕೆ ಹಾಕಿ ಕಣದಿಂದ ಹಿಂದೆ ಸರಿಸಲಾಗುತ್ತಿದೆ. ಚುನಾವಣಾ ಆಯೋಗ ಬೇರೆಲ್ಲೋ ನೋಡುತ್ತಿದೆ ಎಂದು ಆರೋಪಿಸಿದ್ದಾರೆ.

ನಮ್ಮ ಅಭ್ಯರ್ಥಿ ಬಾಮ್ ವಿರುದ್ಧ ಹತ್ಯೆ ಸೇರಿದಂತೆ ಹಲವು ಆರೋಪಗಳನ್ನು ದಾಖಲಿಸಲಾಗಿತ್ತು. ಯಾರೇ ಆಗಲೀ ಹಠಾತ್ತನೆ ನಾಮಪತ್ರ ವಾಪಸ್ ಪಡೆದು ಬಿಜೆಪಿಗೆ ಸೇರುವುದಿಲ್ಲ ಎಂದವರು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಇಂದೋರ್ ನಗರ ಕಾಂಗ್ರೆಸ್ ಘಟಕದ ಕಾರ್ಯಾಧ್ಯಕ್ಷ ದೇವೇಂದ್ರ ಯಾದವ್, ಬೇರು ಮಟ್ಟದ ಕಾರ್ಯಕರ್ತರನ್ನು ಕಡೆಗಣಿಸಿ ಬಾಮ್ ಅವರಿಗೆ ಟಿಕೆಟ್ ನೀಡಲಾಗಿತ್ತು ಎಂದಿದ್ದಾರೆ.

ನಾನೂ ಸಹ ಆಕಾಂಕ್ಷಿಯಾಗಿದ್ದೆ. ಆದರೆ, ನನ್ನಂತಹ ಬೇರು ಮಟ್ಟದ ಕಾರ್ಯಕರ್ತರನ್ನು ಕಡೆಗಣಿಸಿ, ಹಣ ಬಲದ ಕಾರಣದಿಂದ ಬಾಮ್ ಅವರಿಗೆ ಟಿಕೆಟ್ ನೀಡಲಾಗಿತ್ತು. ಅವರು ಕೊನೆಯ ಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆಯುವ ಬಗ್ಗೆ ನಮಗೆ ತಿಳಿದಿತ್ತು ಎಂದೂ ಹೇಳಿದ್ದಾರೆ.

# ಮೋದಿಗೂ ಪ್ರಜ್ವಲ್ ಪ್ರಕರಣಕ್ಕೂ ಸಂಬಂಧವಿಲ್ಲ



ಬೆಂಗಳೂರು, ಏ.29- ರಾಜ್ಯದ ಹೆಣ್ಣು ಮಕ್ಕಳ ಧ್ವನಿಯಾಗಿ ನಾನೂ ಧ್ವನಿ ಎತ್ತುತ್ತೇನೆ.

ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿಯಾವುದೇ ರಾಜೀ ಇಲ್ಲ. ತಪ್ಪು ಆಗಿದ್ದರೆ ಈ ನೆಲದ ಕಾನೂನಿನ ಪ್ರಕಾರ ಶಿಕ್ಷೆ ಆಗಬೇಕು ಎಂಬ ನನ್ನ ನಿಲುವು ಮುಂದುವರೆಯಲಿದೆ ಎಂದು ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಬಿಜೆಪಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ.

ಈ ವಿಚಾರದಲ್ಲಿ ನನ್ನ ಹಾಗೂ ನನ್ನ ತಂದೆಯ ಬಗ್ಗೆ ಯಾರೂ ಸಂಶಯಪಡಬೇಡಿ ಎಂದು ಮನವಿ ಮಾಡಿದರು.

# ಜಿ.ಬಿ. ವಿನಯ್ ಕುಮಾರ್‌ಗೆ ಮತ ನೀಡಿ, ಲೋಕಸಭೆಗೆ ಕಳುಹಿಸಿಕೊಡಿ



### ಐಎಎಸ್ ತರಬೇತಿ ಪಡೆಯುತ್ತಿರುವ ಜಮ್ಮು-ಕಾಶ್ಮೀರ ವಿದ್ಯಾರ್ಥಿಗಳ ಮನವಿ

ದಾವಣಗೆರೆ, ಏ. 29 - ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾದ ಜಿ.ಬಿ. ವಿನಯ್ ಕುಮಾರ್ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸಿ ಲೋಕಸಭೆಗೆ ಕಳುಹಿಸಿಕೊಡಿ ಎಂದು ಜಮ್ಮು ಕಾಶ್ಮೀರದ ಐಎಎಸ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಮನವಿ ಮಾಡಿಕೊಂಡಿದ್ದಾರೆ.

ಇನ್‌ಸೈಟ್ ಐಎಎಸ್ ಸಂಸ್ಥೆಯ ಉಪ ಕಚೇರಿಯೊಂದನ್ನು ಭಾರತದ ಜಮ್ಮು ಕಾಶ್ಮೀರದ ಶ್ರೀನಗರದಲ್ಲಿ ಸ್ಥಾಪಿಸಿ ಭಾರತ ಮಾತೆಯ ಸೇವೆ ಮಾಡುತ್ತಿರುವ ಸೈನಿಕರ ಕುಟುಂಬದ ಹೆಣ್ಣು ಮಕ್ಕಳಿಗೆ ಹಾಗೂ ಜಮ್ಮು ಕಾಶ್ಮೀರದ ಮುಸ್ಲಿಂ ಯುವತಿಯರು ಹಾಗೂ ಮಹಿಳೆಯರಿಗೆ ಉಚಿತವಾಗಿ ಐಎಎಸ್ ತರಬೇತಿ ನೀಡುತ್ತಿದ್ದಾರೆ. ಚುನಾವಣೆಗೆ ಸ್ಪರ್ಧೆ ಮಾಡಿರುವ ವಿನಯ್ ಕುಮಾರ್ ಅವರನ್ನು ಹೆಚ್ಚಿನ ಮತಗಳಿಂದ ಆಯ್ಕೆ ಮಾಡಿ. ಸಂಸದರಾಗಬೇಕೆಂದು ಹಳ್ಳಿ ಹಳ್ಳಿಗಳಿಗೂ ಸುತ್ತಿದ್ದಾರೆ. ಪ್ರಚಾರ ಮಾಡುತ್ತಿದ್ದಾರೆ. ಇಂಥ ಯೋಗ್ಯ ಅಭ್ಯರ್ಥಿಗೆ ತಮ್ಮ ಅಮೂಲ್ಯ ಮತ ನೀಡಿ ಎಂದು ಕೇಳಿಕೊಂಡಿದ್ದಾರೆ.

ಜಮ್ಮು ಕಾಶ್ಮೀರ ಹಾಗೂ ಶ್ರೀನಗರದ ಐಎಎಸ್ ತರಬೇತಿ ಫಲಾನುಭವಿಗಳು ವಿನಯ್ ಕುಮಾರ್ ಅವರ ಪರ ಮತ ಚಲಾಯಿಸಲು ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೂ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಜಮ್ಮುಕಾಶ್ಮೀರದಲ್ಲಿ ನಮ್ಮಂಥ ನೂರಾರು ವಿದ್ಯಾರ್ಥಿಗಳಿಗೆ ಆಶಾಕಿರಣವಾಗಿದ್ದಾರೆ. ಸೈನಿಕರ ಕುಟುಂಬದ ಹೆಣ್ಣು ಮಕ್ಕಳಿಗೆ ಉಚಿತವಾಗಿ ತರಬೇತಿ ನೀಡುವ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ. ಇಂಥವರು ಲೋಕಸಭಾ ಸದಸ್ಯರಾದರೆ ನಿಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುವುದರಲ್ಲಿ ಎರಡು ಮಾತಿಲ್ಲ ಎಂದು ಹೇಳಿದ್ದಾರೆ.


# ಪ್ರಧಾನಿ ಮೋದಿ ಆಡಳಿತಕ್ಕೆ ವಿಶ್ವದಲ್ಲೇ ಮೆಚ್ಚುಗೆ : ಜಿ.ಎಂ.ಸಿದ್ದೇಶ್ವರ

ದಾವಣಗೆರೆ ಏ 29- ಭಾರತ ದೇಶ ಅಷ್ಟೇ ಅಲ್ಲ, ಇಡೀ ವಿಶ್ವವೇ ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿದೆ ಎಂದು ಸಂಸದ ಜಿ. ಎಂ.ಸಿದ್ದೇಶ್ವರ ಹೇಳಿದರು.

ಇಂದಿಲ್ಲಿ ಮೋದಿ ಅವರ ಕಾರ್ಯಕ್ರಮದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಕಾಂಗ್ರೆಸ್ ನವರು ನಮ್ಮ ಬಗ್ಗೆ ಇಲ್ಲ ಸಲ್ಲದ ಆಪಾದನೆ ಮಾಡುತ್ತಲೇ ಬಂದಿದ್ದಾರೆ. ಅವರ ಆಪಾದನೆ ನಮ್ಮ ಪಕ್ಷಕ್ಕೆ ಶ್ರೀರಕ್ಷೆಯಾಗಿದೆ. ಹೀಗಾಗಿ ಕಳೆದ 20 ವರ್ಷಗಳಿಂದ ನಾನು ಈ ಕ್ಷೇತ್ರದ ಸಂಸದನಾಗಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಹೇಳಿದರು.

ನನಗೆ ಆಡಳಿತ ಗೊತ್ತಿಲ್ಲ, ಪಾನ್ ಪರಾಗ್ ತಯಾರಿಸಿ ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂತಹ ಉದ್ಯೋಗ ಮಾಡುತ್ತಿದ್ದಾರೆ ಎಂದು ಆರೋಪಿಸುತ್ತಾರೆ. ಆದರೆ ಅವರೂ ಸಹ ಪಾನ್ ಪರಾಗ್ ತಯಾರಿಕೆಯಲ್ಲಿ ಮಗ್ನನಾಗಿರುವುದು ಎಷ್ಟು ಸಮಂಜಸ ಎಂದು ಸಿದ್ದೇಶ್ವರ ಪ್ರಶ್ನಿಸಿದರು.



ಮಹಿಳೆ ಅಡುಗೆ ಮನೆಗೆ ಸೀಮಿತ ಎಂದು ಬಿಂಬಿಸಿರುವ ಕಾಂಗ್ರೆಸ್ ನವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದೇಶ್ವರ ಅವರು, ತಮ್ಮ ಪತ್ನಿ ಕಳೆದ 20 ವರ್ಷ ರಾಜಕೀಯದ ಅನುಭವ ಹೊಂದಿದ್ದಾರೆ. ನಮ್ಮ ತಂದೆಯವರು ಸೇರಿದಂತೆ ನನ್ನೊಂದಿಗೆ ಪ್ರತಿ ಹಂತದಲ್ಲೂ ರಾಜಕೀಯದ ಏರುಪೇರುಗಳನ್ನು ಕಂಡಿದ್ದಾರೆ.

ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ನಮ್ಮ (ಪತ್ನಿಯ) ಅಭ್ಯರ್ಥಿಯು ಗೆಲುವು ಸಾಧಿಸಲಿದ್ದಾರೆ ಎಂದು ಹೇಳಿದ ಸಿದ್ದೇಶ್ವರ ಅವರು, ಕಾಂಗ್ರೆಸ್ ಅಭ್ಯರ್ಥಿ ದಂತ ವೈದ್ಯರು, ಆದರೆ ರಾಜಕೀಯ ಅನುಭವದ ಕೊರತೆ ಇದೆ ಎಂದು ಲೇವಡಿ ಮಾಡಿದರು.

ನಾನು ಸಂಸದನಾದ ಮೇಲೆ ಪ್ರಧಾನಿ ನರೇಂದ್ರ ಮೋದಿಯವರು ಸುಮಾರು ಸಾವಿರಾರು ಕೋಟಿ ರೂ. ಗಳ ಅನುದಾನ ಬಿಡುಗಡೆ ಮಾಡಿದ್ದಾರೆ. ಹೀಗಾಗಿ ನಾವುಗಳು ನರೇಂದ್ರ ಮೋದಿಯವರ ಸಾರಥ್ಯದಲ್ಲಿಯೇ ಚುನಾವಣೆ ಎದುರಿಸುತ್ತೇವೆ. ಹಾಗಾದರೆ ಅವರು ರಾಹುಲ್ ಗಾಂಧಿಯವರನ್ನು ಬಿಂಬಿಸಲಿ ಎಂದು ಪ್ರಶ್ನೆ ಮಾಡಿದರು.

# ಮಲೇಬೆನ್ನೂರು : ಗಮನ ಸೆಳೆದ ನಟ ಶ್ರೀಧರ್ ಭರತನಾಟ್ಯ



ಮಲೇಬೆನ್ನೂರು, ಏ. 29 - ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸಭಾ ಭವನದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶ್ರೀ ಕಾಂತಾನಂದ ಭಗವಾನ್ ಸರಸ್ವತಿ ಮಹಾರಾಜರ ನೇತೃತ್ವದಲ್ಲಿ ನಡೆದ ರುದ್ರಪಾರಾಯಣದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಿತ್ರ ನಟ ಹಾಗೂ ಭರತ ನಾಟ್ಯ ಕಲಾವಿದ ಶ್ರೀಧರ್ ಅವರು ನಡೆಸಿಕೊಟ್ಟ ಭರತನಾಟ್ಯ ಸಂಗೀತ ನೃತ್ಯಗಳು ಎಲ್ಲರ ಗಮನ ಸೆಳೆದವು. ಇದಕ್ಕೂ ಮುನ್ನ ಬೆಂಗಳೂರಿನ ಡಾ. ರೇಖಾ ರಾಮಚಂದ್ರಮೂರ್ತಿ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವೂ ಮನಸೂರೆಗೊಂಡಿತು.

# ಬೇಸಿಗೆ ಚೆಸ್ ತರಬೇತಿ ಶಿಬಿರ



ದಾವಣಗೆರೆ, ಏ. 29- ದಾವಣಗೆರೆ ಚೆಸ್ ಕ್ಲಬ್ ವತಿಯಿಂದ 4 ರಿಂದ 15 ವರ್ಷದ ಮಕ್ಕಳಿಗೆ ಬೇಸಿಗೆ ಚೆಸ್ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಬರುವ ಮೇ 1 ರಿಂದ 15ನೇ ತಾರೀಖಿನವರೆಗೆ ಎಸ್ ಎಸ್ ಭವನದಲ್ಲಿ ತರಬೇತಿ ಶಿಬಿರಗಳು ನಡೆಯಲಿದೆ. ಆಸಕ್ತರು ಯುವರಾಜ್ (99456 13469) ಮಂಜುಳಾ (7259310197) ತಿಳಿಸಿದ್ದಾರೆ.

# ಅಭಿವೃದ್ಧಿಗಾಗಿ ಕಾಂಗ್ರೆಸ್ ಬೆಂಬಲಿಸಬೇಕು



(1ನೇ ಪುಟದಿಂದ) ಮಲ್ಲಿಕಾರ್ಜುನ್ ಅವರ ಪರವಾಗಿ ಮತ ಯಾಚಿಸಿ, ಮತದಾರರನ್ನುದ್ದೇಶಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಸಾಕಷ್ಟು ಅಭಿವೃದ್ಧಿ ಮಾಡಿದ್ದು, ಇನ್ನಷ್ಟು ಅಭಿವೃದ್ಧಿಗೆ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಲೋಕಸಭೆಗೆ ಕಳುಹಿಸಬೇಕೆಂದರು.

ಇಡೀ ದೇಶಕ್ಕೆ ಮಾದರಿ ಆಗುವಂತೆ ಕ್ಷೇತ್ರವನ್ನು ಅಭಿವೃದ್ಧಿ ಮಾಡುವಂತಹ ಜಾಣತನವನ್ನು ಪ್ರಭಾ ಮಲ್ಲಿಕಾರ್ಜುನ್ ಅವರು ಹೊಂದಿದ್ದು, ದಾವಣಗೆರೆ ಕ್ಷೇತ್ರದ ಮತದಾರರ ಹಿತವನ್ನು ಕಾಪಾಡುವರು ಎಂದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ದಾವಣಗೆರೆ ಲೋಕಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ಒಂದು ಸಾವಿರದ ನೂರಾ ಹದಿನೇಳು ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರೆಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗವನ್ನು ಜಾರಿಗೊಳಿಸುವುದು, ನರೇಗಾ ಕೂಲಿ ಹಣವನ್ನು ರೂ. 400 ಕ್ಕೆ ಹೆಚ್ಚಿಸುವುದೂ ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮುಖಂಡರುಗಳಾದ ಮೇಕಾ ಮುರುಳಿಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ನಾಗರಾಜ್, ಜಬೀವುಲ್ಲಾ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಗೋವಿಂದಸ್ವಾಮಿ, ಲೋಹಿತ್, ನಂದಿಗಾವಿ ರಾಜಣ್ಣ, ಬಾಪೂಜಿ ಬ್ಯಾಂಕ್ ಡಿ.ವಿ. ರವೀಂದ್ರ, ಸತೀಶ್ ಪಾಟೀಲ್, ಕೋಗಲೂರು ಶಿವಣ್ಣ, ಮಾರನಿ ಮುರುಳಿಕೃಷ್ಣ, ಕಣಿವೆ ಬಿಳಚಿ ಡಿ.ಮಂಜಣ್ಣ, ವೆಂಕಟೇಶಪುರ ವೈಟ್ಲ ಮೋಹನ್, ಶಿವನಾರಾಯಣ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಮಾದಿಗ ಸಮುದಾಯ ಮತ ಬ್ಯಾಂಕ್ ಅಲ್ಲ

ದಾವಣಗೆರೆ, ಏ. 29- ಮಾದಿಗ ಸಮುದಾಯ ಮತ ಬ್ಯಾಂಕ್ ಅಲ್ಲ ಎಂದಿರುವ ಶ್ರೀ ಆದಿಜಾಂಭವ ಗುರುಪೀಠದ ಶ್ರೀ ಷಡಾಕ್ಷರಿ ಮುನಿ ದೇಶೀಕೇಂದ್ರ ಮಹಾಸ್ವಾಮೀಜಿ, ಸಮುದಾಯವನ್ನು ವೋಟ್ ಬ್ಯಾಂಕ್ ಆಗಿ ಬಳಸಿಕೊಳ್ಳುವ ರಾಜಕೀಯ ಪಕ್ಷಗಳಿಗೆ ಬುದ್ದಿ ಕಲಿಸುವಂತೆ ಕರೆ ನೀಡಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೊಡ್ಡ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯ ಚುನಾವಣಾ ಸಂದರ್ಭದಲ್ಲಿ ಹಣದ ಆಮಿಷಕ್ಕೆ ಬಲಿಯಾಗದೆ ಜಾಗರೂಕರಾಗಿ ಮತ ಚಲಾಯಿಸಬೇಕು. ಏಕ ಮುಖ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸ್ಪಷ್ಟ ನಿಲುವು ತಳೆಯದ ಹೊರತು ಸಮುದಾಯದ ಉದ್ಧಾರ ಸಾಧ್ಯವಿಲ್ಲ. ದಾಸ್ಯದ ಸಂಕೋಲೆ, ಗುಲಾಮಗಿರಿಯಿಂದ ಹೊರಬರಬೇಕಾದರೆ ಚುನಾವಣೆಗಳಲ್ಲಿ ಒಗ್ಗಟ್ಟು ಪ್ರದರ್ಶಿಸಬೇಕಾದ ಅಗತ್ಯವಿದೆ ಎಂದರು. ಈ ಹಿನ್ನೆಲೆಯಲ್ಲಿ ಆದಿಜಾಂಭವ ಪೀಠ ಸಮುದಾಯ ಜಾಗೃತಿಗಾಗಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಗಳು ಹೇಳಿದರು.

# ಸಿಇಟಿ ಮರು ಪರೀಕ್ಷೆ ಇಲ್ಲ

(1ನೇ ಪುಟದಿಂದ) ಕೆಇಎ ಸರಿಯಾದ ಉತ್ತರಗಳೊಡನೆ ಪಠ್ಯಕ್ರಮದ ಹೊರತಾದ ಪ್ರಶ್ನೆಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡುವುದು.

ಸಿಇಟಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳ ಅಂಕಗಳನ್ನು ಉಳಿದ ಪ್ರಶ್ನೆಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವುದರಿಂದ ಅಭ್ಯರ್ಥಿಗಳ ಹಿತ ಕಾಪಾಡಲಾಗುವುದು.

ಸಿಇಟಿಗೆ ಮರು ಪರೀಕ್ಷೆ ಮಾಡಬಾರದೆಂದು ಸರ್ಕಾರ ತೀರ್ಮಾನಿಸಿದೆ. ಮೇ ಮತ್ತು ಜೂನ್ ಮಾಹೆಯಲ್ಲಿ ಕಾಮೆಡ್-ಕೆ, ಜೆಇಇ ಮುಖ್ಯ ಪರೀಕ್ಷೆ, ನೀಟ್, ನಾಟಾ ಮತ್ತು ಎರಡನೇ ಪಿಯುಸಿಯ 2 ಮತ್ತು 3ನೇ ಪರೀಕ್ಷೆ ನಡೆಯುಲಿವೆ.

ಇಂತಹ ಸಂದರ್ಭದಲ್ಲಿ ಸಿಇಟಿಗೆ ಮರುಪರೀಕ್ಷೆ ಸೂಕ್ತವಲ್ಲವೆಂದು ಹಾಗೂ ವಿದ್ಯಾರ್ಥಿಗಳಿಗೆ ಹೊರೆಯಾಗುವುದನ್ನು ಗಮನಿಸಿ, ಇಂತಹ ತೀರ್ಮಾನ ಕೈಗೊಳ್ಳಲಾಗಿದೆ.

ವಿದ್ಯಾರ್ಥಿಗಳು ಮುಂದೆ ಇನ್ನೂ ಅನೇಕ ಪರೀಕ್ಷೆಗಳನ್ನು ಬರೆಯಬೇಕಿರುವುದರಿಂದ ಸಿಇಟಿಗೇ ಒತ್ತು ನೀಡಲು ಸಾಧ್ಯವಿಲ್ಲ.

ಪರೀಕ್ಷೆ ನಡೆಸಿದರೆ ವೃತ್ತಿ ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿ ವಿಳಂಬವಾಗುತ್ತದೆ. ಇಂತಹ ಘಟನೆಗಳು ಭವಿಷ್ಯದಲ್ಲಿ ಮರುಕಳಿಸದಂತೆ ಕೆಇಎ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು ನಿಗದಿತ ಮಾನದಂಡಗಳನ್ನು ರೂಪಿಸಬೇಕು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪಠ್ಯಕ್ರಮದ ಹೊರತಾದ ಪ್ರಶ್ನೆಗಳನ್ನು ಹೊರತುಪಡಿಸಿ, ಮೌಲ್ಯಮಾಪನ ನಡೆಸಲು ತೀರ್ಮಾನಿಸಲಾಗಿದೆ ಎಂದರು.

# ಕುರ್ಚಿಗಾಗಿ ದ್ವೇಷ ಹುಟ್ಟಿಸುತ್ತಿರುವ ಮೋದಿ: ಡಿಬಿ

ದಾವಣಗೆರೆ, ಏ. 29- ಪ್ರಧಾನಿ ಮೋದಿಯವರದ್ದು ವಿಕಸಿತ ಭಾರತವಲ್ಲ, ವಿನಾಶ ಭಾರತ. ಪ್ರಧಾನಿ ಕುರ್ಚಿಗಾಗಿ ಒಂದೇ ತಾಯಿಯ ಮಕ್ಕಳಂತಿರುವ ಹಿಂದೂ-ಮುಸ್ಲಿಮರಲ್ಲಿ ದ್ವೇಷ ಹುಟ್ಟಿಸುವ ಕೆಲಸವನ್ನು ನರೇಂದ್ರ ಮೋದಿ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಚುನಾವಣೆ ನಡೆದಿರುವ ಉತ್ತರ ಭಾಗದಲ್ಲಿ ಬಿಜೆಪಿ ಸೋಲುವುದು ಖಚಿತವಾಗಿದ್ದರಿಂದ ಮೋದಿ ದಕ್ಷಿಣದತ್ತ ಓಡಿ ಬರುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ನಿನ್ನೆ ಹಾವೇರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಮತದಾರರಿಗಾಗಿ ಸಮಾವೇಶ ನಡೆದರೂ ಜನ ಸೇರಿಲ್ಲ. ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲುವುದಿಲ್ಲ. ಸಮಾವೇಶದಲ್ಲಿ ಮೋದಿಗೆ ಕಮಲ ಅರಳುವ ಟೋಪಿ ಹಾಕುವಾಗ ಟೋಪಿ ಜಾರಿ ಬಿದ್ದುದೇ ಬಿಜೆಪಿ ಸೋಲಿಗೆ ಸೂಚನೆ ಎಂದು ಬಸವರಾಜ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಎಸ್.ಎಂ. ಜಯಪ್ರಕಾಶ್, ಕೆ.ಎಂ. ಮಂಜುನಾಥ್, ಡಿ. ಶಿವಕುಮಾರ್, ಬಿ.ಎಚ್. ಉದಯಕುಮಾರ್, ಸುರೇಶ್, ಮುಬಾರಕ್ ಇತರರಿದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ. ಶ್ರೀಮತಿ ಅಜ್ಜಂಪುರ ಸಂಗನಬಸಮ್ಮ, ದಿ. ಶ್ರೀ ಅಜ್ಜಂಪುರ ಸಿದ್ದರಾಮಪ್ಪ ಜ್ಞಾಪಕಾರ್ಥವಾಗಿ ಅಜ್ಜಂಪುರ ಮೃತ್ಯುಂಜಯಪ್ಪ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

ಮನೆ ಮಾರಾಟಕ್ಕಿದೆ
ಸುಮಾರು 5 ಚದರ ಅಡಿಯಲ್ಲಿರುವ ಸುವ್ಯವಸ್ಥಿತವಾದ ಕೆಳ ಹಾಗೂ ಮೇಲ್ಮನೆ ಇರುವ ಮನೆಯು ಮಾರಾಟಕ್ಕೆ ಇದೆ. ಖರೀದಿಸುವ ಆಸಕ್ತರು ಕರೆ ಮಾಡಬಹುದು.
98803 00615

ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Shah Opticals
4th Main, Opp. Drushti Eye Hospital, P.J Extension, Davanagere - 577002
93536 89957

HOUSE FOR RENT
Double Bed Room House for Rent, in 1st floor, MCC `A` block, Davangere.
98440 12137

ಬೇಕಾಗಿದ್ದಾರೆ
ಅಕೌಂಟ್ಸ್ ನೋಡಿಕೊಳ್ಳಲು ಬಿ.ಕಾಂ. ಆಗಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ
ನವೋದಯ ಚಿಟ್ ಫಂಡ್ಸ್,
ಸ್ಟಾಲ್ ನಂ.34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಸಂಪರ್ಕ ಸಮಯ : ಬೆಳಿಗ್ಗೆ 11.30

ಬೇಕಾಗಿದ್ದಾರೆ
ಲಹರಿ ಕಲೆಕ್ಷನ್ಸ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಒಬ್ಬ ಹುಡುಗಿ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : ಆಂಜನೇಯ ಬಡಾವಣೆ ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
99456 60195

REQUIRED
Lady Receptionist, Lady Teacher, Marketing Executive,
Contact :
8660998651
9164256425

ಬೇಕಾಗಿದ್ದಾರೆ
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
98450-35710, 77607-39990

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ವಧು ಬೇಕಾಗಿದೆ
44 ವರ್ಷದ ಫೈನಾನ್ಸ್ ಮಾಡುತ್ತಿರುವ ವರನಿಗೆ ಎರಡನೇ ಮದುವೆಗೆ ವಧು ಬೇಕಾಗಿದೆ.
89047 54519
86784 74909

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ.
81056 99985
89715 04492

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಬೇಕಾಗಿದ್ದಾರೆ
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮತ್ತು ಡಿಗ್ರಿ ಆದ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

ಮೆಡಿಕಲ್ ಶಾಪ್ ಮಾರಾಟಕ್ಕಿದೆ
ರ್‍ಯಾಕ್ಸ್, ಕೌಂಟರ್ ಟೇಬಲ್ ಸಮೇತ ಮಾರಾಟಕ್ಕಿದೆ.
84313 57744
98443 79910

ಬಾಡಿಗೆಗೆ ಇದೆ
3BHK ಮನೆ, 1ನೇ ಮಹಡಿ ನೀರಿನ ಸೌಕರ್ಯವಿರುವ ಬಸವೇಶ್ವರ ನಗರ, ಸಪ್ತಗಿರಿ ಹಾಸ್ಟೆಲ್ ಹಿಂಭಾಗ 40 ಅಡಿ ಮೇನ್ ರಸ್ತೆ
94481 15270

ಬೋರ್ ವೆಲ್ ಪಾಯಿಂಟ್
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ :
97436 54365
86609 98651

ಬೆಂಗಳೂರಿನಲ್ಲಿ
ಹೌಸ್‌ಕೀಪಿಂಗ್‌ಗೆ ಬೇಕಾಗಿದ್ದಾರೆ
ಗಂಡ-ಹೆಂಡತಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 25,000 ರೂ. ಇಬ್ಬರಿಂದ ರೂಂ ಮತ್ತು ಗ್ಯಾಸ್ ಉಚಿತ.
97400 98047

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್
ಬಟವಾಡಿ ವೃತ್ತ, ತುಮಕೂರು
ಫೋ : 84960 44942, 82774 09101
28.05.2024 ಕೇರಳ : ವೈನಾಡು, ಅಲೆಪ್ಪಿ, ಜಟಾಯು ಥೀಮ್ ಪಾರ್ಕ್, ಕಾಲಾಡಿ, ತ್ರಿವೆಂಡ್ರಂ, ಶ್ರೀ ಅನಂತ ಪದ್ಮಾನಾಭ, ಕೋವಲಂ ಬೀಚ್, ಗುರುವಾಯೂರ್, ತ್ರಿಶೂರ್, ಎಸಿ ಬಸ್ 6 ದಿನಗಳು.
14.05.2024 ಶಿರಡಿ, ಮೂರು ಜ್ಯೋತಿರ್ಲಿಂಗ : ಭೀಮಾಶಂಕರ, ಘೃಷ್ಣೇಶ್ವರ, ತ್ರಯಂಬಕೇಶ್ವರ, ನಾಸಿಕ್, ಶಿರಡಿ, ಶನಿಸಿಂಗನಾಪುರ, ಪಂಡರಾಪುರ, ಕೊಲ್ಲಾಪುರ, ಸೊಲಾಪುರ (ಎಸಿ ಬಸ್) 6 ದಿನ
09.06.2024 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಮಧ್ಯಪ್ರದೇಶ : ಓಂಕಾರೇಶ್ವರ, ಮಹಾಕಾಳೇಶ್ವರ, ಸೋಮನಾಥ, ನಾಗೇಶ್ವರ, ಬೇಟ್, ದ್ವಾರಕಾ, ಪೋರ್‌ಬಂದರ್, ನಿಷ್ಕಳಂಕ ಮಹಾದೇವ, ಅಕ್ಷರಧಾಮ, ಮಾತೃಗಯ, ಅಲಹಾಬಾದ್, ಸರ್ದಾರ್ ಪಟೇಲ್ ಪ್ರತಿಮೆ, ವಿಮಾನ ಪ್ರವಾಸ 10 ದಿನಗಳು.
27.06.2024 ರಾಜಸ್ಥಾನ ವಿಮಾನ ಪ್ರವಾಸ : ಜೈಪುರ, ಪುಷ್ಕರ್, ಜೈಸಲ್ಮೇರ್, ಜೋಧ್‌ಪುರ್, ಉದಯ್‌ಪುರ್, ಮೌಂಟ್ ಅಬು, ನಾಥದ್ವಾರ. 10 ದಿನಗಳು.
23.07.2024 ಕಾಶಿ, ವೈದ್ಯನಾಥ (ಜಾರ್ಖಂಡ್), ಎರಡು ಜ್ಯೋತಿರ್ಲಿಂಗ : ಕಾಶಿ, ಅಯೋಧ್ಯೆ, ವೈದ್ಯನಾಥ, ಅಲಹಾಬಾದ್, ಗಯಾ, ಬುದ್ಧಗಯಾ. ವಿಮಾನ ಪ್ರವಾಸ 8 ದಿನಗಳು.
ಎಲ್ಲಾ ಪ್ರವಾಸಕ್ಕೂ ಕಾಫಿ, ತಿಂಡಿ-ಊಟ, ಡೀಲಕ್ಸ್ ರೂಂ, ಪ್ರಯಾಣ ವೆಚ್ಚ ಸೇರಿದೆ.
ಮಲ್ಲಿಕಾರ್ಜುನ ಟೂರ್ಸ್, ತುಮಕೂರು
8496044942, 8277409101

ಮನೆ ಬಾಡಿಗೆಗೆ ಇದೆ
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992


REQUIRED
Lady candidate for office work & Accountant / GST
PJ Extension, Davangere.
99006 66122

ಕೆಲಸಕ್ಕೆ ಬೇಕಾಗಿದ್ದಾರೆ
1) ANM/GNM ನರ್ಸಿಂಗ್-01
2) ಆಯಾ ಕೆಲಸ - 01
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ನೇರ ಸಂದರ್ಶನಕ್ಕೆ ಸಂಪರ್ಕಿಸಿ
86186 42929
08192-252228

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
SSLC ನೇರ ಪರೀಕ್ಷೆ
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

WANTED
OM DENTAL CARE
Ram & Co Circle, Davangere.
1) Staff
2) Attenders
(Full time & Part Time)
90669 93738

WANTED
Security guard Wanted Davangere.
Contact :
88846 48954

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

WANTED TEACHERS
Maths - 05, Science - 05
English - 05, Social - 05
Nursery - 10, PE - 02
Accountant - 02, Art & Craft - 02
Computer - 01, Warden - 02
SRI GURUKULA
International Residential School
Lokikere Main Road, Thurchagatta Village, DAVANGERE.
73386 04512
73386 04513

ಬೇಕಾಗಿದ್ದಾರೆ
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಕೆಲಸಕ್ಕೆ ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
1) ಅಕೌಂಟೆಂಟ್ (Accountant)
2) ಕ್ಯಾಷಿಯರ್ (Cashiers)
3) ಸಪ್ಲೈಯರ್ಸ್ (Suppliers)
ಅನುಭವ ಉಳ್ಳವರಿಗೆ ಮೊದಲ ಆದ್ಯತೆ.
96060 96697
88846 30532 96067 45754

ಮಳಿಗೆ ಬಾಡಿಗೆಗಿದೆ
8x40 ಅಳತೆಯ ಎರಡು ಮಳಿಗೆ, ದಕ್ಷಿಣ ಮುಖ, ಮುಸ್ಲೀಮ್ ಖಬರ್‌ಸ್ತಾನ್ ಪಕ್ಕ, ಪಿ.ಬಿ. ರೋಡ್, ಕುಂದವಾಡ ಸರ್ಕಲ್ ಹತ್ತಿರ.
ಸಂಪರ್ಕಿಸಿ :
93438 55613

Finance Advisor
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
78923 29921, 96326 11005

SALES EXECUTIVES WANTED
Male / Female
Good Communication Skill
Attractive Salary
Kabbur Furnitures
Beside Sultan Diamonds & Gold Showroom
P.B Road, Davanagere.
8951916300

ಬೇಕಾಗಿದ್ದಾರೆ
ಬಿ.ಎಸ್ಸಿ., ಬಿ.ಇಡಿ. (ವಿಜ್ಞಾನ, ಗಣಿತ)
ಬಿ.ಎ., ಬಿ.ಇಡಿ. (ಕನ್ನಡ, ಇಂಗ್ಲೀಷ್, ಹಿಂದಿ, ಸಮಾಜ)
ಹಾಗೂ ಬಿಎಸ್ಸಿ., ಬಿ.ಎ. ತರಬೇತಿ ಪಡೆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

# ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಶ್ರಮದಾನ

## ಮೋದಿ ಕಾರ್ಯಕ್ರಮದ ಬಳಿಕ ಮೈದಾನ ಸ್ವಚ್ಛತೆ, ಬಿಜೆಪಿ ಮುಖಂಡರು, ಕಾರ್ಯಕರ್ತರು ಸಾಥ್



ದಾವಣಗೆರೆ, ಏ. 29 - ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರಾಂದೋಲನ ಸಭೆ ನಿನ್ನೆ ನಡೆದ ಹೈಸ್ಕೂಲ್ ಮೈದಾನದಲ್ಲಿ ಸ್ವಚ್ಛತಾ ಕಾರ್ಯ ಮಾಡುವ ಮೂಲಕ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ಧೇಶ್ವರ ಅವರು ಶ್ರಮದಾನ ಮಾಡಿದರು.

ಬಿಜೆಪಿ ಮುಖಂಡರು, ಮಹಾನಗರ ಪಾಲಿಕೆ ಸದಸ್ಯರು, ಕಾರ್ಯಕರ್ತರ ಜೊತೆಯಲ್ಲಿ ಕಸ ಗುಡಿಸಿ, ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಬಳಿಕ ಮಾತನಾಡಿದ ಅವರು ಇಲ್ಲಿ ನಮ್ಮ ಕಾರ್ಯಕ್ರಮ ಆಗಿದ್ದು, ಇದನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ನರೇಂದ್ರ ಮೋದಿ ಜೀ ಅವರು ನಮಗೆಲ್ಲ ಪಾಠ ಮಾಡಿರುವುದು ಸ್ವಚ್ಛ ಭಾರತ್ ಬಗ್ಗೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಜೀ ಅವರ ಕಾರ್ಯಕ್ರಮದಿಂದ ನನಗೆ ಮತ್ತು ನಮ್ಮ ಕಾರ್ಯಕರ್ತರಿಗೆ ಬೂಸ್ಟರ್ ಡೋಸ್ ಸಿಕ್ಕಿದಂತಾಗಿದೆ. ನನ್ನ ಪರವಾಗಿ ಮತಯಾಚಿಸಲು ಮೋದಿ ಜೀ ಆಗಮಿಸಿದ್ದು, ನನ್ನ ಗೆಲುವಿಗೆ ಶ್ರೀರಕ್ಷೆ. ಇಂದು ಇಡೀ ವಿಶ್ವವೇ ಕೊಂಡಾಡುತ್ತಿರುವ ನರೇಂದ್ರ ಮೋದಿ ಜೀ ಅವರು ದಾವಣಗೆರೆ ಲೋಕಸಭಾ ಕ್ಷೇತ್ರದ ಜನರ ಆಶೀರ್ವಾದ ಕೇಳಲು ಬಂದಿದ್ದಾರೆ. ನಾವು-ನೀವೆಲ್ಲರೂ ಸೇರಿ ಮೋದಿ ಜೀ ಅವರ ಕೈಬಲಪಡಿಸಲು ಇನ್ನೂ 6 ದಿನ ಮಾತ್ರ ಬಾಕಿ ಇದೆ. ಇನ್ನು 6 ದಿನ ನಾವೆಲ್ಲ ವಾನರ ಸೇನೆಯಂತೆ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಮೋದಿ ಜೀ ಅವರ ಕಾರ್ಯಕ್ರಮಕ್ಕೆ ಲಕ್ಷೋಪ ಲಕ್ಷ ಜನ ಸಾಗರದಂತೆ ಹರಿದು ಬಂದಿದ್ದರು. ಇಡೀ ಹೈಸ್ಕೂಲ್ ಮೈದಾನ ತುಂಬಿ ಜನ ಹೊರಗೆ ನಿಂತು ಕಾರ್ಯಕ್ರಮ ವೀಕ್ಷಿಸಿದರು. ನಿನ್ನೆ ಬಂದಂತಹ ಜನಸ್ತೋಮ ನೋಡಿದ್ರೆ ನಮ್ಮ ಗೆಲುವು ನಿಶ್ಚಿತವಾಗಿದೆ. ಮೋದಿ ಜೀ ಅವರು ಪ್ರಧಾನಿ ಆಗುವುದು ಖಚಿತವಾಗಿದೆ ಎಂದರು.

ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಮಾಜಿ ಮೇಯರ್ ಬಿ.ಜಿ.ಅಜಯ್ ಕುಮಾರ್, ಬಿಜೆಪಿ ಯುವ ಮುಖಂಡರಾದ ಜಿ.ಎಸ್. ಅನಿತ್ ಕುಮಾರ್, ಜಿ.ಎಸ್.ಅಶ್ವಿನಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಜಗದೀಶ್, ಪಾಲಿಕೆ ವಿರೋಧ ಪಕ್ಷದ ನಾಯಕ ಪ್ರಸನ್ನ ಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ ವಿನಾಯಕ್ ಪೈಲ್ವಾನ್, ವೀಣಾ ನಂಜಪ್ಪ, ಗಾಯತ್ರಿ ಬಾಯಿ ಖಂಡೋಜಿ ರಾವ್, ಗಂಗಾಧರ್, ಶಿವನಗೌಡ ಪಾಟೀಲ್, ಗುರುರಾಜ್, ಪದ್ಮನಾಭ, ಲಿಂಗರಾಜ್, ಸಂತೋಷ್ ಕೋಟಿ, ಕಿಶೋರ್ ಸೇರಿದಂತೆ 24ನೇ ವಾರ್ಡಿನ ಸದಸ್ಯರು, ಬಿಜೆಪಿ ಕಾರ್ಯಕರ್ತರು ಜೊತೆಯಲ್ಲಿದ್ದರು.

# ಪರವಾನಗಿ ಪಡೆಯದ ಜಿಲ್ಲೆಯ ಚಿಟ್ ಫಂಡ್ ಸಂಸ್ಥೆಗಳೊಂದಿಗೆ ವ್ಯವಹಾರ ಮಾಡದಿರಲು ಸೂಚನೆ

ದಾವಣಗೆರೆ, ಏ. 29 - ದಾವಣಗೆರೆ ಜಿಲ್ಲೆಯಲ್ಲಿ ಚಿಟ್ ಫಂಡ್ ನಡೆಸುತ್ತಿರುವ ಸುಮಾರು 31 ಚಿಟ್ ಫಂಡ್ ಸಂಸ್ಥೆಗಳು ಇಲಾಖೆಯಿಂದ ಪರವಾನಗಿ ಪಡೆದಿರುವುದಿಲ್ಲ ಎಂದು ಸಹಕಾರ ಸಂಘಗಳ ಉಪನಿಬಂಧಕರಾದ ಹೆಚ್.ಅನ್ನಪೂರ್ಣ ಅವರು ತಿಳಿಸಿದ್ದಾರೆ.

**ಸಂಸ್ಥೆಗಳ ಹೆಸರು:** ಶ್ರೀರಾಮ ಚಿಟ್ಸ್ ಪ್ರೈ ಲಿ., ಕಪಿಲ್ ಚಿಟ್ಸ್ ಪ್ರೈ ಲಿ, ದಾವಣಗೆರೆ, ಶ್ರೀ ಕರಾಯಿಲ್ ಚಿಟ್ಸ್ (ಇಂಡಿಯಾ) ಲಿ. ತಿರುಪುರ ತಮಿಳುನಾಡು ಶಾಖೆ ದಾವಣಗೆರೆ, ಸ್ಥರ ಚಿಟ್ ಫಂಡ್ಸ್ ಪ್ರೈ ಲಿ., ಚೇತನಾ ಚಿಟ್ಸ್ ಹಾವೇರಿ ಪ್ರೈ ಲಿ, ದಾವಣಗೆರೆ., ಹೊಯ್ಸಳ ಚಿಟ್ ಫಂಡ್ಸ್, ಸಿದ್ದೇಶ್ವರ ಚಿಟ್ಸ್, ಈರುಳ್ಳಿ ಮಾರ್ಕೆಟ್ ಹತ್ತಿರ ದಾವಣಗೆರೆ., ನಯನ ಚಿಟ್ಸ್ ಫಂಡ್ ದಾವಣಗೆರೆ. ಶಶಿಕಿರಣ್ ಚಿಟ್ ಫಂಡ್ಸ್ ಪ್ರೈ ಲಿ., ಚಿಲುಕೂರಿ ಚಿಟ್ಸ್ (ಇಂಡಿಯಾ) ಪ್ರೈ.ಲಿ., ಚನ್ನಪ್ಪ ಚಿಟ್ ಫಂಡ್ಸ್, ಅಭಿವೃದ್ಧಿ ಚಿಟ್ ಫಂಡ್ಸ್, ಶ್ರೀ ಮಂಜುನಾಥ ಚಿಟ್ ಫಂಡ್ಸ್, ಎಸ್.ಆರ್.ಕೆ ಚಿಟ್ ಫಂಡ್ಸ್, ಸಮೃದ್ದಿ ಚಿಟ್ ಫಂಡ್ಸ್, ಸೇವಾಲಾಲ್ ಚಿಟ್ ಫಂಡ್ಸ್, ಎಸ್.ಎಸ್.ವಿ ಚಿಟ್ ಫಂಡ್ಸ್, ಜಿ-1 ಚಿಟ್ಸ್ ಕರ್ನಾಟಕ, ಶ್ರೀದುರ್ಗಾ ಚಿಟ್ ಫಂಡ್ಸ್, ಎಸ್.ಎಂ.ಜೆ ಚಿಟ್ ಫಂಡ್ಸ್, ಶ್ರೀ ಕೃಷ್ಣ ಚಿಟ್ ಫಂಡ್ಸ್, ಶ್ರೀ ವಿನಯ ಚಿಟ್ಸ್ ಫಂಡ್ಸ್, ಕೆ.ಬಿ.ಎಸ್ ಶ್ರೀ ಅದೃಷ್ಟ ಚಿಟ್ ಫಂಡ್ಸ್, ಶ್ರೀ ನಿಮಿಷಾಂಬ ಚಿಟ್ ಫಂಡ್ಸ್, ಶ್ರೀ ಕುಬೇರ ಚಿಟ್ಸ್ ಫಂಡ್ಸ್, ಶ್ರೀ ಕಲ್ಲೇಶ್ವರ ಚಿಟ್ಸ್ (ಕ) ಪ್ರೈ ಲಿ. ಪಾಪರೆಡ್ಡಿ ಪಾಳ್ಯ ನಾಗರಬಾವಿ ಬೆಂಗಳೂರು, ಸಿದ್ದಿ ವಿನಾಯಕ ಚಿಟ್ ಫಂಡ್ಸ್ (ಹರಿಹರ), ಅಪೂರ್ವ ಚಿಟ್ ಫಂಡ್ಸ್, ಭಾಗ್ಯೋದಯ ಚಿಟ್ ಫಂಡ್ಸ್ ಈ ಸಂಸ್ಥೆಯವರು ನಿಯಮಾನುಸಾರ ಅನುಮತಿ ಪಡೆದಿರುವುದಿಲ್ಲ.

ಮೇಲಿನ ಸಂಸ್ಥೆಯವರು ಚಿಟ್ಸ್ ಫಂಡ್ ನಡೆಸುವುದಾದರೆ, ಅಗತ್ಯ ದಾಖಲೆಗಳೊಂದಿಗೆ 15 ದಿನಗಳೊಳಗಾಗಿ ಉಪನಿಬಂಧಕರು ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಜಿಲ್ಲಾಡಳಿತ ಭವನ, ದಾವಣಗೆರೆ ಇವರಿಗೆ ತಮ್ಮ ಮನವಿಯನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಚೀಟಿ ನಿಧಿಗಳ ಕಾಯ್ದೆಯಡಿ ಚೀಟಿ ವ್ಯವಹಾರ ಮಾಡಲು ನೀಡಿರುವ ಅನುಮತಿಯನ್ನು ರದ್ದುಪಡಿಸುವಂತೆ ಕೇಂದ್ರ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ಉಜ್ಜಿನಿ ಗುರುಪೀಠಕ್ಕೆ ಗಾಯತ್ರಿ ಸಿದ್ದೇಶ್ವರ ಭೇಟಿ



ದಾವಣಗೆರೆ, ಏ. 29 - ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಉಜ್ಜಿನಿ ಗುರುಪೀಠಕ್ಕೆ ಭೇಟಿ ನೀಡಿ ಶ್ರೀ 1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಗೌರವ ಸಲ್ಲಿಸಿ, ಆಶೀರ್ವಾದ ಪಡೆದರು. ಈ ವೇಳೆ ಮುಖಂಡರಾದ ಮುರುಗೇಶ್ ಆರಾಧ್ಯ, ದ್ರಾಕ್ಷಾಯಿಣಿ, ಋತು ಹಾಗೂ ಮಠದ ಆಡಳಿತ ಮಂಡಳಿಯವರು ಇದ್ದರು.

## ಶಿಕ್ಷಣದಲ್ಲಿ ರಂಗಕಲೆಯೂ ವಿದ್ಯಾರ್ಥಿಗಳ ಮನ ಗೆಲ್ಲಲಿದೆ : ಪ್ರೊ. ವೃಷಬೇಂದ್ರಪ್ಪ

ದಾವಣಗೆರೆ, ಏ.29- ಪುಸ್ತಕದಲ್ಲಿ ಇಲ್ಲದ್ದನ್ನು ಮಕ್ಕಳಿಗೆ ಮನ ಮುಟ್ಟುವ ಹಾಗೆ ಅರ್ಥೈಸಲು, ಶಿಕ್ಷಣದಲ್ಲಿ ರಂಗಕಲೆ ಸಹಾಯಕವಾಗಿದೆ ಎಂದು ಬಿಇಎ ಶಿಕ್ಷಣ ಮಹಾವಿದ್ಯಾಲಯದ ಆಡಳಿತಾಧಿಕಾರಿ ಪ್ರೊ. ವೈ. ವೃಷಭೇಂದ್ರಪ್ಪ ತಿಳಿಸಿದರು.

ನಗರದ ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಶಿಕ್ಷಣದಲ್ಲಿ ರಂಗಕಲೆ ಕಾರ್ಯಾಗಾರ' ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಗಾರವು ಶಿಕ್ಷಣ ವೃತ್ತಿಯಲ್ಲಿ ತೊಡಗುವ ಭಾವೀ ಶಿಕ್ಷಕರಿಗೆ ಮಹತ್ವದ್ದು. ಸುಲಭವಾಗಿ ಮಕ್ಕಳಿಗೆ ಪಾಠ ಅರ್ಥೈಸಲು ರಂಗಕಲೆ ಶಿಕ್ಷಣ ಅನುಕೂಲ ಎಂದರು.

ಸೋಮಿನಕೊಪ್ಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಅಣ್ಣಪ್ಪ ಒಂಟಮಾಳಗಿ ಮಾತನಾಡಿ, ಕೇವಲ ಒಂದೇ ಮಾದರಿ ಅನುಸರಿಸಿ ಪಾಠ ಮಾಡಿದರೆ ಮಕ್ಕಳಿಗೆ ಅರ್ಥೈಸಿಕೊಳ್ಳಲು ಕಷ್ಟವಾಗಲಿದೆ. ಈ ನಿಟ್ಟಿನಲ್ಲಿ ಹಾಡು, ಅಭಿನಯ, ಡಾನ್ಸ್ ಮತ್ತು ಇತರೆ ಚಟುವಟಿಕೆಗಳ ಮೂಲಕ ಪಾಠ ಮಾಡಿದಾಗ ವಿದ್ಯಾರ್ಥಿಗಳ ಕಲಿಕೆ ಸುಲಭವಾಗಲಿದೆ ಎಂದರು.

ಉಪನ್ಯಾಸಕ ಡಾ. ಸಾಸ್ವೆಹಳ್ಳಿ ಸತೀಶ್, ಕಾಲೇಜಿನ ಪ್ರಾಚಾರ್ಯ ಡಾ.ಎ.ಜೆ ನೀತಾ, ಸಹಾಯಕ ಪ್ರಾಧ್ಯಾಪಕ ಕೆ. ಮುರುಗೇಶಿ ಮತ್ತಿತರರು ಉಪಸ್ಥಿತರಿದ್ದರು.

## ಪ್ರಭಾ ಗೆಲುವಿಗೆ ವೀರಭದ್ರಸ್ವಾಮಿ ಅವರಿಂದ ದೀಡು ನಮಸ್ಕಾರ

ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವಿಗೆ ಪ್ರಾರ್ಥಿಸಿ ಕಾಂಗ್ರೆಸ್ ಮುಖಂಡ ವೀರಭದ್ರಸ್ವಾಮಿ ಮಟ್ಟಿಕಲ್ ಅವರು ಇಂದು ದೀಡು ನಮಸ್ಕಾರ ಹಾಕಲಿದ್ದಾರೆ.

ಇಂದು ಬೆಳಿಗ್ಗೆ 11.30 ಗಂಟೆಗೆ ಹಳೇಪೇಟೆಯ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಿಂದ ಹೊರಟು ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಗುಗ್ಗಳದೊಂದಿಗೆ ದೀಡು ನಮಸ್ಕಾರ ನಡೆಸಲಿರುವ ವೀರಭದ್ರಸ್ವಾಮಿ ಅವರು ಬಾಯಿಗೆ ಶಸ್ತ್ರ, ನಾಲಿಗೆಗೆ ಶಿವದಾರ ಧರಿಸಲಿದ್ದಾರೆ. ಬಳಿಕ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲುವಿಗೆ ಅನುಗ್ರಹಿಸುವಂತೆ ದೇವರಲ್ಲಿ ಪ್ರಾರ್ಥಿಸಲಿದ್ದಾರೆ.

## ಕೊಲೀಜಿಯಂ ಪ್ರಶ್ನಿಸುವ ಅರ್ಜಿ ವಿಚಾರಣೆಗೆ ಸುಪ್ರೀಂ ನಕಾರ


ನವದೆಹಲಿ, ಏ. 29 - ನ್ಯಾಯಮೂರ್ತಿಗಳ ಕೊಲೀಜಿಯಂ ವ್ಯವಸ್ಥೆ ಮೂಲಕ ಉನ್ನತ ನ್ಯಾಯಾಂಗದಲ್ಲಿ ನೇಮಕ ಮಾಡುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲಾ ಮತ್ತು ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠದ ಎದುರು ವಕೀಲ ಮಾಥ್ಯೂಸ್ ನೆಡುಂಪರ ಅರ್ಜಿ ಸಲ್ಲಿಸಿದ್ದರು. ಆದರೆ, ಈ ಅರ್ಜಿಯನ್ನು ದಾಖಲಿಸಿಕೊಳ್ಳಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಕೊಲೀಜಿಯಂ ವ್ಯವಸ್ಥೆ ರದ್ದುಗೊಳಿಸುವ ಎನ್.ಜೆ.ಎ.ಸಿ. ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಸಂವಿಧಾನ ಬಾಹಿರ ಎಂದು ತಳ್ಳಿ ಹಾಕಿತ್ತು.

## ಹೆಬ್ಬಾಳು ಶ್ರೀಗಳ ಆಶೀರ್ವಾದ ಪಡೆದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಎಸ್ಸೆಸ್ಸೆಂ



ಮಾಯಕೊಂಡ, ಏ. 29 - ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಹೆಬ್ಬಾಳ್ ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್.ಬಸವಂತಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪ್ರವಾಸ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಾಯಕೊಂಡ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಬಾಡ ಗ್ರಾಮದಿಂದ ಮಧ್ಯಾಹ್ನ 3ರಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು ಕಂದಗಲ್ಲು, ಮಳಲಕೆರೆ, ದ್ಯಾಮೇನಹಳ್ಳಿ, ರಾಮಗೊಂಡನಹಳ್ಳಿ, ಅತ್ತಿಗೆರೆ, ಚಿಕ್ಕತೊಗಲೇರಿ, ಕುರ್ಕಿ, ತೋಳಹುಣಸೆ ಗ್ರಾಮಗಳಲ್ಲಿ ರಾತ್ರಿ 9.30ರವರೆಗೆ ಮತಯಾಚನೆ ಮಾಡುವರು.

ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕ ಕೆ.ಎಸ್.ಬಸವಂತಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ತಿಳಿಸಿದ್ದಾರೆ.

# ಸಮಾನತೆಯ ಜಗತ್ತಿಗೆ ಮಲೇರಿಯಾ ವಿರುದ್ದದ ಹೋರಾಟವನ್ನು ತೀವ್ರಗೊಳಿಸಲು ಕರೆ



**ಹರಪನಹಳ್ಳಿ ತಾಲ್ಲೂಕು ಚಿಗಟೇರಿಯಲ್ಲಿನ ವಿಶ್ವ ಮಲೇರಿಯಾ ದಿನಾಚರಣೆ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ, ಡಾ. ಅರವಿಂದ್**

ಹರಪನಹಳ್ಳಿ, ಏ. 29 - ವಿಶ್ವ ಮಲೇರಿಯಾ ದಿನಾಚರಣೆ 25 ಏಪ್ರಿಲ್ ಹೆಚ್ಚು ಸಮಾನತೆಯ ಜಗತ್ತಿಗೆ ಮಲೇರಿಯಾ ವಿರುದ್ದದ ಹೋರಾಟವನ್ನು ತೀವ್ರಗೊಳಿಸೋಣ. ಮಲೇರಿಯಾ ರೋಗದಿಂದ ಮುಕ್ತರಾಗಲು ಸೊಳ್ಳೆಗಳ ನಿರ್ಮೂಲನೆಯಿಂದಲೇ ಸಾಧ್ಯ. ಯಾವುದೇ ಜ್ವರವಿರಲಿ ರಕ್ತಪರೀಕ್ಷೆ ಮಾಡಿಸಿಕೊಳ್ಳಿ. ಮಲೇರಿಯಾ ಖಚಿತ ಎಂದು ದೃಢಪಟ್ಟಲ್ಲಿ ತ್ವರಿತ ಚಿಕಿತ್ಸೆ ನೀಡಲಾಗುವುದು ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ, ಡಾ. ಅರವಿಂದ್ ತಿಳಿಸಿದರು.

ತಾಲ್ಲೂಕಿನ ಚಿಗಟೇರಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ವಿಶ್ವ ಮಲೇರಿಯಾ ದಿನಾಚರಣೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ಏಪ್ರಿಲ್ 25 ರಂದು ಮಲೇರಿಯಾದ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ಮಲೇರಿಯಾ ಚಿಕಿತ್ಸೆಯಾದ ಕ್ಲೋರೋಕ್ವಿನ್ ಮತ್ತು ಪ್ರೈಮಾಕ್ವಿನ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಮತ್ತು ರೋಗ ಪೀಡಿತ ಪ್ರದೇಶಗಳಲ್ಲಿ ಸೊಳ್ಳೆಗಳ ನಿರ್ಮೂಲನೆಗಾಗಿ ಬಳಸುವ ಡಿ.ಡಿ.ಟಿ. ಸಿಂಪರಣೆ ಮಾಡಬೇಕು ಎಂದು ತಿಳಿಸಿದರು.

ಸಿ.ಜಿ. ಭುವನೇಶ್ವರಿ ಮಾತನಾಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಚಿಗಟೇರಿ ಇವರು ಮಲೇರಿಯಾ ಮನುಕುಲದ ಇತಿಹಾಸದಲ್ಲೇ ಒಂದು ಹಳೆಯ ಪಿಡುಗು. ಆಡು ಮುಟ್ಟದ ಸೊಪ್ಪಿಲ್ಲ ಮಲೇರಿಯಾ ಗೊತ್ತಿಲ್ಲದ ಜನರಿಲ್ಲ. ಎಂಬ ಗಾದೆ ಮಾತಿನಂತೆ ಮಲೇರಿಯ ರೋಗ ಯಾವ ದೇವರ ಶಾಪವೂ ಅಲ್ಲ, ಪಾಪದ ಪ್ರತಿಫಲವೂ ಅಲ್ಲ. ಇದು ಮಾನವನ ಬೇಜವಾಬ್ದಾರಿಯ ಕಳಕಳಿ ಇರಬೇಕು ಎಂದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಚಂದ್ರೇಗೌಡ ತ್ಯಾಗರಾಜ್, ಕೆಂಚಮ್ಮ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ಇಂದು ನಗರದಲ್ಲಿ ಎಸ್ಸೆಸ್ ರೋಡ್ ಷೋ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇಂದು ರೋಡ್ ಷೋ ಮೂಲಕ ಮತಯಾಚಿಸುವರು.

ಇಂದು ಸಂಜೆ 4-30ಕ್ಕೆ ಹಾಸಬಾವಿ ಸರ್ಕಲ್ ನಿಂದ ಆರಂಭವಾಗುವ ಈ ರೋಡ್ ಷೋ, ಮದೀನಾ ಸರ್ಕಲ್, ಅಖ್ತರ್ ರಜಾ ಸರ್ಕಲ್, ಎಸ್.ಎಸ್.ಮಲ್ಲಿಕಾರ್ಜುನ ನಗರದ ಮೂಲಕ ಕ್ರೀಡಾಂಗಣದವರೆಗೂ ನಡೆಯಲಿದೆ.

ಈ ರೋಡ್ ಷೋನಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಮುಖಂಡರುಗಳಾದ ಸಾಧಿಕ್ ಪೈಲ್ವಾನ್, ಸೈಯದ್ ಸೈಫುಲ್ಲಾ, ತಂಜೀ ಸಮಿತಿ ಅಧ್ಯಕ್ಷ ದಾದುಸೇಠ್, ಬುತ್ತಿ ಗಫೂರ್ ಸಾಬ್, ಸಿ.ಕೆ.ಮುಸ್ತಾಕ್, ಎಸ್.ಕೆ. ಅಮ್ಜದ್, ಎ.ಬಿ.ಹಬೀಬ್ ಸಾಬ್, ಷಾ ನವಾಜ್ ಖಾನ್, ಮನ್ಸೂರ್, ಮಹಾನಗರ ಪಾಲಿಕೆ ಸದಸ್ಯರುಗಳಾದ ಕೆ.ಚಮನ್ ಸಾಬ್, ಸೈಯದ್ ಚಾರ್ಲಿ, ಹುರ್ ಬಾನು ಪಂಡಿತ್, ಜಾಕೀರ್ ಅಲಿ, ಕಬೀರ್ ಖಾನ್, ಎ.ಬಿ.ರಹೀಂ, ಅಯ್ಯಪ್ಪ ದಾದು, ಸೌಮ್ಯ ನರೇಂದ್ರ, ಮಾಜಿ ಸದಸ್ಯ ಪರಸಪ್ಪ, ಅಲ್ತಾಫ್ ಹುಸೇನ್, ಫಾರೂಕ್, ಮುನ್ನಾ ಪೈಲ್ವಾನ್, ಎನ್.ಕೆ.ಇಸ್ಮಾಯಿಲ್, ಲಾಲ್ ಆರೀಫ್, ಕೊಡಪಾನ ದಾದಾಪೀರ್ ಪಾಲ್ಗೊಳ್ಳುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ತಿಳಿಸಿದ್ದಾರೆ.

## ಗಾಂಧಾರಿ ವಿದ್ಯೆ ತರಬೇತಿ ಸಮಾರೋಪ



ದಾವಣಗೆರೆ, ಏ. 29- ನಗರದ ಸೋಮೇಶ್ವರ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ನಡೆದ ಗಾಂಧಾರಿ ವಿದ್ಯೆ ತರಬೇತಿಯ ಸಮಾರೋಪ ಸಮಾರಂಭ ನಡೆಯಿತು.

ಈ ಸಂದರ್ಭದಲ್ಲಿ ಶಿಬಿರದ ಮಕ್ಕಳಿಂದ ತಮ್ಮ ತಂದೆ - ತಾಯಂದಿರಿಗೆ ಪಾದಪೂಜೆ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ವೀರೇಶ್ ಹಿರೇಮಠ ಉಪಸ್ಥಿತರಿದ್ದರು.

ಬೆಂಗಳೂರಿನ ಜ್ಞಾನ ಸಮೃದ್ಧಿ ವಿದ್ಯಾ ಕೇಂದ್ರದ ತರಬೇತುದಾರ ಜೆಂಬಿಗಿ ಕೊಟ್ರೇಶ್ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಿ ಮಾತನಾಡಿ, ನಿರಂತರ ಕಲಿಕೆ ಯಶಸ್ಸಿಗೆ ದಾರಿದೀಪ ಎಂದು ತಿಳಿಸಿದರು.

# ಮಕ್ಕಳಿಲ್ಲದ ದಂಪತಿಗೆ ದತ್ತು ಭಾಗ್ಯ, ದತ್ತು ನೀಡಿದ ಡಿಸಿ

ದಾವಣಗೆರೆ, ಏ.29- ಕುಟುಂಬದಲ್ಲಿ ತಂದೆ - ತಾಯಿ, ಮಕ್ಕಳಿದ್ದರೆ ಅದೇನೋ ಚಂದದ ಮನೆಯಂತೆ ಕಾಣುತ್ತದೆ. ಅನೇಕರ ದಾಂಪತ್ಯದಲ್ಲಿ ಮಕ್ಕಳ ಫಲವಿಲ್ಲದೇ ಜೀವನದಲ್ಲಿ ನಿರುತ್ಸಾಹ, ನಿರಾಸೆ ಭಾವನೆಯಿಂದ ದಿನಗಳನ್ನು ಸಾಗಿಸುತ್ತಾರೆ. ಕಳೆದ 16 ವರ್ಷಗಳಿಂದ ಮಕ್ಕಳಿಲ್ಲದೇ ನಿರಾಸೆಯಾಗಿದ್ದ ಬಳ್ಳಾರಿ ಮೂಲದ ದಂಪತಿ ಸರ್ಕಾರದಿಂದ 4 ತಿಂಗಳ ಗಂಡು ಮಗುವನ್ನು ದತ್ತು ಪಡೆದಿದ್ದಾರೆ.

ದಾವಣಗೆರೆ ಜಿಲ್ಲಾ ದತ್ತು ಸ್ವೀಕಾರ ಕೇಂದ್ರದಿಂದ ಬಳ್ಳಾರಿ ಮೂಲದ ದಂಪತಿ ಸೋಮವಾರ ಮಗುವನ್ನು ದತ್ತು ಪಡೆದಿದ್ದು, ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ಅವರು ಮಗುವನ್ನು ದತ್ತು ನೀಡಿದರು.

ಮಕ್ಕಳಿಲ್ಲದವರು ಮತ್ತು ಮಕ್ಕಳನ್ನು ಸಾಕಬಯಸುವ ಪೋಷಕರು ಮಕ್ಕಳನ್ನು ದತ್ತು ಪಡೆಯಲು ಅವಕಾಶ ಇರುತ್ತದೆ.

ಪ್ರತಿಯೊಂದು ಜಿಲ್ಲೆಯಲ್ಲಿ ದತ್ತು ಸ್ವೀಕಾರ ಕೇಂದ್ರಗಳಿರುತ್ತವೆ. ಅನಾಥವಾಗಿರುವ ಮಗು, ಮಗು ಪೋಷಣೆ ಮಾಡಲು ಸಾಧ್ಯವಾಗದವರಿಂದ ಮಗುವನ್ನು ಈ ಕೇಂದ್ರದಲ್ಲಿ ಪಡೆಯಲಾಗುತ್ತದೆ. ಈ ಮಗುವನ್ನು ಇಲ್ಲಿ ಪಾಲನೆ ಪೋಷಣೆ ಮಾಡಿ, ಮಗುವಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಸರ್ಕಾರದಿಂದ ಕಲ್ಪಿಸಿ ಮಗುವನ್ನು ಪಾಲನೆ, ಪೋಷಣೆ ಮಾಡಲಾಗುತ್ತದೆ.

ದತ್ತು ಸ್ವೀಕಾರದಲ್ಲಿನ ಮಗುವನ್ನು ಬೇರೆ ಪೋಷಕರು ದತ್ತು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ನಿಯಮಗಳಿರುತ್ತವೆ. ಮಗು ಬೇಕಾದವರು ಸೆಂಟ್ರಲ್ ಅಡಾಪ್ಷನ್ ರೀಸೋರ್ಸ್ ಅಥಾರಿಟಿ ಮತ್ತು ಸ್ಟೇಟ್ ಅಡಾಪ್ಷನ್ ರೀಸೋರ್ಸ್ ಅಥಾರಿಟಿ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಸಬೇಕು. ಮಕ್ಕಳಿಲ್ಲದ ಪೋಷಕರು ಮಗು ದತ್ತು ಪಡೆಯಲು ನೋಂದಣಿ ನಂತರ ದಂಪತಿಗಳಿಬ್ಬರ ವಯೋಮಾನದ ಆಧಾರದ ಮೇಲೆ ಯಾವ ವಯಸ್ಸಿನ ಮಗು ದತ್ತು ಪಡೆಯಬಹುದೆಂದು ಮ್ಯಾಚ್ ಮಾಡಲಾಗುತ್ತದೆ. ಅವರ ವಯೋಮಾನ ಮತ್ತು ಷರತ್ತುಗಳನ್ನು ಪೂರೈಸಿದ ಪೋಷಕರಿಗೆ ಮಗು ದತ್ತು ನೀಡಲು ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ.

ಇಂದು ದತ್ತು ಪಡೆದ ದಂಪತಿ ವಿವಾಹವಾಗಿ 16 ವರ್ಷಗಳಿಂದ ಮಕ್ಕಳಿರಲಿಲ್ಲ, ಇವರು ಸುಮಾರು 40-45 ವರ್ಷದ ವಯೋಮಾನದ ಪೋಷಕರಾಗಿರುವರು.

ಇವರಿಗೆ ನಾಲ್ಕು ತಿಂಗಳ ಮಗು ಮ್ಯಾಚ್ ಆಗಿದ್ದರಿಂದ ದತ್ತು ನೀಡಲಾಗಿದೆ. ಇವರು ಕಳೆದ 3 ವರ್ಷಗಳಿಂದ ನೋಂದಣಿ ಮಾಡಿಸಿ, ದತ್ತು ಪಡೆಯಲು ಕಾಯುತ್ತಿದ್ದರು.

ಪೋಷಕರು ದತ್ತು ಸ್ವೀಕರಿಸಿದ ವೇಳೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಕವಿತಾ, ಮಕ್ಕಳ ರಕ್ಷಣಾಧಿಕಾರಿ ಚಂದ್ರಶೇಖರ್, ಅಧೀಕ್ಷಕರಾದ ಲತಾ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ವಾಕ್ ಮತ್ತು ಶ್ರವಣದೋಷವುಳ್ಳ ವಿಕಲಚೇತನರಿಂದ ಮತದಾನ ಜಾಗೃತಿ

ದಾವಣಗೆರೆ, ಏ. 29 - ಲೋಕಸಭಾ ಚುನಾವಣೆ-2024ರ ಪ್ರಯುಕ್ತ ಸ್ವೀಪ್ ಕಾರ್ಯಕ್ರಮದಡಿ ಮೇ 1 ರಂದು ಸಂಜೆ 4 ಕ್ಕೆ ನಗರದ ಜಯದೇವ ಸರ್ಕಲ್‌ನಲ್ಲಿ ವಾಕ್ ಮತ್ತು ಶ್ರವಣದೋಷವುಳ್ಳ ವಿಶೇಷ ಚೇತನರಿಂದ ಮತದಾನ ಜಾಗೃತಿ ಕಾರ್ಯಕ್ರಮ ನಡೆಸಲಾಗುವುದೆಂದು ಜಿಲ್ಲಾ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ಜಿ.ಎಂ.ಸಿದ್ದೇಶ್ವರ, ಮಲ್ಲಿಕಾರ್ಜುನ್ ಕೊಡುಗೆಗಳ ಬಹಿರಂಗ ಚರ್ಚೆ

ದಾವಣಗೆರೆ, ಏ. 29 – ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ನೀಡಿರುವ ಕೊಡುಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನೀಡಿರುವ ಕೊಡುಗೆಯ ಬಗ್ಗೆ ಬಹಿರಂಗ ಚರ್ಚೆಗೆ ಬರುವಂತೆ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ಸಚಿವರಿಗೆ ಸವಾಲೆಸೆದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆಗೆ ಸಂಸದ ಸಿದ್ದೇಶ್ವರ ಅವರ ಕೊಡುಗೆ ಏನೂ ಇಲ್ಲ ಎಂದು ಮಲ್ಲಿಕಾರ್ಜುನ್ ಅವರು ಹೇಳಿದ್ದಾರೆ. ಈ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ಧ. ವಿಶೇಷವಾಗಿ ಕಳೆದ ಒಂದು ವರ್ಷದಲ್ಲಿ ಸಚಿವರು ಜಿಲ್ಲೆಗೆ ನೀಡಿರುವ ಕೊಡುಗೆಗಳ ಬಗ್ಗೆ ಚರ್ಚೆಯಾಗಬೇಕಿದೆ ಎಂದು ಹೇಳಿದರು.

ಸಿದ್ದೇಶ್ವರ ಅವರ ಅವಧಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಜಾರಿಗೆ ಬಂದಿದೆ. ರೈಲ್ವೆ ನಿಲ್ದಾಣದ ಅಭಿವೃದ್ಧಿ, ಬಸ್ ನಿಲ್ದಾಣ ಅಭಿವೃದ್ಧಿ, ವಂದೇ ಭಾರತ್ ರೈಲು, ಪಾಸ್‌ಪೋರ್ಟ್ ಕೇಂದ್ರ, ಜಲ ಜೀವನ್ ಮಿಷನ್ ಕುಡಿಯುವ ನೀರಿನ ಯೋಜನೆ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ಇ.ಎಸ್.ಐ. ಆಸ್ಪತ್ರೆ ಉನ್ನತೀಕರಣ, 790 ಕಿ.ಮೀ. ಗ್ರಾಮ ಸಡಕ್ ರಸ್ತೆ, ಕೇಂದ್ರೀಯ ವಿದ್ಯಾಲಯ ಸ್ಥಾಪನೆ, ಎಸ್.ಟಿ.ಪಿ.ಐ. ಘಟಕ ಸ್ಥಾಪನೆ, ದಿವ್ಯಾಂಗರ ಚಿಕಿತ್ಸಾ ಘಟಕ ಸೇರಿದಂತೆ ಸಾಲು ಸಾಲು ಅಭಿವೃದ್ಧಿ ಕೆಲಸ ಮಾಡಿದ್ದೇವೆ ಎಂದವರು ತಿಳಿಸಿದರು.

ಈ ಬಗ್ಗೆ ಯಾವ ಸರ್ಕಲ್‌ನಲ್ಲಿ ಬೇಕಾದರೂ ಚರ್ಚೆಗೆ ಸಿದ್ಧವಿದ್ದೇವೆ. ನೀವೂ- ನಾನೂ ಬೆಣ್ಣೆ ದೋಸೆ ತಿನ್ನುತ್ತಾ ಚರ್ಚೆ ಮಾಡೋಣ. ಈ ಚರ್ಚೆಗೆ ನನ್ನೊಂದಿಗೆ ಸಂಸದ ಸಿದ್ದೇಶ್ವರ ಅವರೂ ಬರಲಿದ್ದಾರೆ, ನೀವೂ ಬನ್ನಿ ಎಂದು ಆಹ್ವಾನ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಹಾಗೂ ಜೆಡಿಎಸ್ ನಾಯಕ ಬಂಡೆಪ್ಪ ಕಾಶೆಂಪೂರ್, ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡಿದ್ದರು. ಆದರೆ, ಈಗಿನ ಕಾಂಗ್ರೆಸ್ ಸರ್ಕಾರ ರೈತರಿಗೆ ಯಾವುದೇ ನೆರವು ನೀಡುತ್ತಿಲ್ಲ. ಸರ್ಕಾರ ದಿವಾಳಿ ಆಗಿದೆಯಾ? ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರದಲ್ಲಿ ಯಾವುದೇ ದೊಡ್ಡ ಯೋಜನೆ ಜಾರಿಗೆ ಬರುತ್ತಿಲ್ಲ. ಗ್ಯಾರಂಟಿಗಳ ಕಾರಣದಿಂದ ಸರ್ಕಾರ ಸಂಪೂರ್ಣ ಕುಸಿದಿದೆ ಎಂದು ಆರೋಪಿಸಿದರು.

### ವಿಕೋಪ ಪರಿಹಾರದ ಶ್ವೇತ ಪತ್ರಕ್ಕೆ ಆಗ್ರಹ

ಮನಮೋಹನ್ ಸಿಂಗ್ ಅವರ ಯು.ಪಿ.ಎ. ಸರ್ಕಾರ ಹತ್ತು ವರ್ಷ ಆಡಳಿತ ನಡೆಸಿದಾಗ ಕರ್ನಾಟಕಕ್ಕೆ ವಿಕೋಪ ಪರಿಹಾರವಾಗಿ ಕೇವಲ 3,665 ಕೋಟಿ ರೂ. ನೀಡಲಾಗಿತ್ತು. ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರದಲ್ಲಿ ಹತ್ತು ವರ್ಷಗಳಲ್ಲಿ 15,996 ಕೋಟಿ ರೂ.ಗಳ ಪರಿಹಾರ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾನ್ಯ ಜ್ಞಾನ ಇಲ್ಲದಂತೆ ಮಾತನಾಡುತ್ತಿದ್ದಾರೆ ಎಂದು ಪರಿಷತ್ ಸದಸ್ಯ ರವಿಕುಮಾರ್ ತರಾಟೆಗೆ ತೆಗೆದುಕೊಂಡಿದ್ದಾರೆ.

ಮನಮೋಹನ್ ಸಿಂಗ್ ಹಾಗೂ ಮೋದಿ ಸರ್ಕಾರಗಳ ಅವಧಿಯಲ್ಲಿ ಬಿಡುಗಡೆ ಮಾಡಿರುವ ವಿಕೋಪ ಪರಿಹಾರಕ್ಕೆ ಸಂಬಂಧಿಸಿದಂತೆ ಶ್ವೇತ ಪತ್ರ ಹೊರಡಿಸುವಂತೆ ಅವರು ಸವಾಲು ಹಾಕಿದರು.

### ರವಿಕುಮಾರ್ ಸವಾಲು

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಕಡಿಮೆ ಸ್ಥಾನ ದೊರೆತರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನಕ್ಕೆ ಧಕ್ಕೆಯಾಗಲಿದೆ ಎಂಬುದು ಸರಿಯಲ್ಲ. 135 ಶಾಸಕರ ಬೆಂಬಲ ಇರುವವರೆಗೂ ಅವರು ಮುಂದುವರೆಯುತ್ತಾರೆ. ಈಗ ನಡೆಯುತ್ತಿರುವ ಲೋಕಸಭಾ ಚುನಾವಣೆ. ಇದರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಸೊನ್ನೆ ಸ್ಥಾನ ದೊರೆತರೂ ಸಿದ್ದರಾಮಯ್ಯ ಅವರ ಕುತ್ತಿಗೆಗೆ ಬರಲ್ಲ. ಇದು ಮೋದಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡುವಿನ ಸ್ಪರ್ಧೆ ಎಂದರು.

ಈ ಸಂದರ್ಭದಲ್ಲಿ ಪಾಲಿಕೆ ವಿಪಕ್ಷ ನಾಯಕ ಪ್ರಸನ್ನ ಕುಮಾರ್, ಮುಖಂಡರಾದ ಕೊಳೇನಹಳ್ಳಿ ಸತೀಶ್, ಬೆಳವನೂರು ನಾಗೇಶ್ವರ ರಾವ್, ಗಣೇಶ ದಾಸಕರಿಯಪ್ಪ, ಮಹೇಂದ್ರ ಹೆಬ್ಬಾಳ್, ಐರಣಿ ಅಣ್ಣೇಶ್, ರಾಜನಹಳ್ಳಿ ಶಿವಕುಮಾರ್, ಬಿಳಿಚೋಡು ಬೈರೇಶ್, ರಘುನಂದನ್ ಅಂಬರ್‌ಕರ್, ಕುಂದುವಾಡದ ಗಣೇಶಪ್ಪ, ಹೆಚ್.ಎನ್. ಗುರುಮೂರ್ತಿ, ಶಿರಮಗೊಂಡನಹಳ್ಳಿ ಶಿವಮೂರ್ತೆಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀನಿವಾಸ್ ಪ್ರಸಾದ್ ನಿಧನಕ್ಕೆ ವಿನಯ್ ಕುಮಾರ್ ಸಂತಾಪ

ದಾವಣಗೆರೆ, ಏ. 29 - ಶೋಷಿತರ ಧ್ವನಿಯಾಗಿ, ನೊಂದವರಿಗಾಗಿ, ದಲಿತ ದಮನಿತರ ಪರವಾಗಿ ನಿಂತು ಹೋರಾಟ ಮಾಡಿದ ಹಿರಿಯ ನಾಯಕ ಹಾಗೂ ಸಂಸದ ಶ್ರೀನಿವಾಸ್ ಪ್ರಸಾದ್ ಅವರ ನಿಧನಕ್ಕೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರು ಸಂತಾಪ ಸೂಚಿಸಿದ್ದಾರೆ.

**DAVID Coaching Center**
Coaching classes for SSLC students commences
**from 1st of May 2024**
**CBSE and State Syllabus,** Subjects : **Maths & Science**
***Highlights :*** • 33 years of teaching Experience
• Digital classes • Individual attention
• Regular Class test • Printed Notes
• Timely completion of syllabus
**Contact : Mr. David** : #2491, MCC A Block, 9th Cross,
Near Hair trend Spa Davanagere. **Mob : 94482 33494**

District 2nd Rank State 9th Rank



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)

ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು

ಎಸ್.ಎಸ್. ಲೇಔಟ್, 'ಎ' ಬ್ಲಾಕ್, ದಾವಣಗೆರೆ-04. email: athanidvg@gmail.com

Ph: 08192 297667, 89715 99739, 99647 56302, 99642 50319

ADMISSION OPEN FOR 1ST PUC

COMMERCE AND ARTS

* 100 out of 100 * Accountancy - 4 * Statistics - 2
* Political science - 2 * Business studies - 1 * Kannada - 1

Outstanding performance by ATHANI COMPOSITE P U COLLEGE in ARTS AND COMMERCE.

ವಾಣಿಜ್ಯ ವಿಭಾಗ

589/600

ರಮ್ಯಾ ಎಸ್.ಆರ್. 589 (98.17%)

ಅಂಧ ವಿದ್ಯಾರ್ಥಿಗಳು



ಜಿ.ಟಿ.ದೀಪಾ 578 (96.33%)



ಮೇಘನಾ ಎಂ. 573 (95.50%)

TOTAL DISTINCTION 177

TOTAL FIRST CLASS 165

2023-24ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಮ್ಯಾ ಎಸ್.ಆರ್. ಎಂಬ ವಿದ್ಯಾರ್ಥಿನಿ ವಾಣಿಜ್ಯ ವಿಭಾಗದಲ್ಲಿ 589 (98.17%) ಅಂಕಗಳನ್ನು ಗಳಿಸಿ, ದಾವಣಗೆರೆ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿರುತ್ತಾರೆ ಹಾಗೂ

ಕಲಾ ವಿಭಾಗದಲ್ಲಿ ಅಂಧ ವಿದ್ಯಾರ್ಥಿನಿಯರಾದ ಜಿ.ಟಿ.ದೀಪಾ 578 (96.33%) ಹಾಗೂ ಮೇಘನಾ ಎಂ. 573 (95.50%) ಅಂಕಗಳನ್ನು ಗಳಿಸಿ, ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸ್ಫೂರ್ತಿದಾಯಕವಾಗಿರುತ್ತಾರೆ.

ಈ ವಿದ್ಯಾರ್ಥಿಗಳ ಸಾಧನೆ ಕಾಲೇಜಿಗೆ ಹಾಗೂ ಪೋಷಕರಿಗೆ ಹರ್ಷದಾಯಕವಾಗಿರುತ್ತದೆ. ಇವರಿಗೆ ಆಡಳಿತ ಮಂಡಳಿಯವರು, ಪ್ರಾಂಶುಪಾಲರು, ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು ಈ ಮೂಲಕ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿರುತ್ತಾರೆ.


# ಮಾಜಿ ಸಚಿವ ಶ್ರೀನಿವಾಸ ಪ್ರಸಾದ್ ನಿಧನ



ಮೈಸೂರು, ಏ. 29 - ಕೇಂದ್ರದ ಮಾಜಿ ಸಚಿವ, ಚಾಮರಾಜನಗರ ಸಂಸದ ವಿ. ಶ್ರೀನಿವಾಸ ಪ್ರಸಾದ್ (76) ಹೃದಯಾಘಾತದಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸೋಮವಾರ ಮುಂಜಾನೆ ನಿಧನರಾದರು.

ಮೂತ್ರಕೋಶದ ಸೋಂಕಿನ ಕಾರಣಕ್ಕೆ ಅವರು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಮಧ್ಯರಾತ್ರಿ 1.20ರ ಸುಮಾರಿಗೆ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರು ಪತ್ನಿ ಭಾಗ್ಯಲಕ್ಷ್ಮಿ ಪ್ರಸಾದ್, ಪುತ್ರಿಯರಾದ ಪ್ರತಿಮಾ ಪ್ರಸಾದ್, ಪೂರ್ಣಿಮಾ ಪ್ರಸಾದ್ ಹಾಗೂ ಪೂನಂ ಪ್ರಸಾದ್ ಅವರನ್ನು ಅಗಲಿದ್ದಾರೆ.

ಅವರು ಚಾಮರಾಜನಗರ ಕ್ಷೇತ್ರವನ್ನು ಏಳು ಅವಧಿಗೆ ಸಂಸದರಾಗಿ ಪ್ರತಿನಿಧಿಸಿದ್ದರು ಮತ್ತು ಎರಡು ಬಾರಿ ನಂಜನಗೂಡು ಕ್ಷೇತ್ರದಿಂದ ಶಾಸಕರಾಗಿದ್ದರು.

ಅವರು ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾಗಿ ಮತ್ತು ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರದಲ್ಲಿ ಕಂದಾಯ ಮತ್ತು ಮುಜರಾಯಿ ಇಲಾಖೆ ಸಚಿವ ಸೇರಿದಂತೆ ಪ್ರಮುಖ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ, ಹಲವಾರು ಗಣ್ಯರು ಅಂತಿಮ ದರ್ಶನ ಪಡೆದಿದ್ದಾರೆ. ನಾಳೆ ದಿನಾಂಕ 30ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಶ್ರೀನಿವಾಸಪ್ರಸಾದ್ ಅವರ ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನ್ ಅಂಡ್ ಕಲ್ಚರಲ್ ಟ್ರಸ್ಟ್ ಜಾಗದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.



## ಸಂಭ್ರಮದ ಕೂಡಲ ಸಂಗಮೇಶ್ವರ ಜಾತ್ರೆ

ದಾವಣಗೆರೆ, ಏ. 29 - ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮ ಶ್ರೀ ಸಂಗಮೇಶ್ವರ ಜಾತ್ರಾ ಮಹೋತ್ಸವವು ಲಕ್ಷಾಂತರ ಜನರ ಸಮ್ಮುಖದಲ್ಲಿ ಸೋಮವಾರ ಜರುಗಿತು.

ಈ ಸಂದರ್ಭದಲ್ಲಿ ನಗರದ ದೇವರಮನಿ ಶಿವರಾಜ್, ಬಕ್ಕೇಶ್ ದೇವರಮನಿ, ಜಯದೇವ ದೇವರಮನಿ, ಪ್ರಕಾಶ್ ಹಾಗೂ ಇತರರು ಉಪಸ್ಥಿತರಿದ್ದರು.

## ಮಾಜಿ ಸಚಿವ ಎಂ.ಪಿ.ಪ್ರಕಾಶ್ ಧರ್ಮಪತ್ನಿ ರುದ್ರಾಂಬ ನಿಧನ




ಹೂವಿನಹಡಗಲಿ, ಏ.29- ಮಾಜಿ ಉಪಮುಖ್ಯಮಂತ್ರಿ ದಿ. ಎಂ.ಪಿ.ಪ್ರಕಾಶ್ ಅವರ ಧರ್ಮಪತ್ನಿ ಶ್ರೀಮತಿ ಎಂ.ಪಿ.ರುದ್ರಾಂಬ ಪ್ರಕಾಶ್ (83) ಅವರು ಇಂದು ಸಂಜೆ ವಯೋಸಹಜ ಕಾಯಿಲೆಯಿಂದ ನಿಧನರಾದರು.

ಮೂವರು ಪುತ್ರಿಯರಾದ ಹರಪನಹಳ್ಳಿ ಶಾಸಕರಾದ ಶ್ರೀಮತಿ ಎಂ.ಪಿ.ಲತಾ, ರಂಗಭಾರತಿ ಅಧ್ಯಕ್ಷರಾದ ಎಂ.ಪಿ.ಸುಮಾ, ಎಂ.ಪಿ.ವೀಣಾ ಅವರುಗಳಲ್ಲದೇ, ಅಪಾರ ಬಂಧು-ಬಳಗವನ್ನು ಅವರು ಅಗಲಿದ್ದಾರೆ. ಪುತ್ರ ಮಾಜಿ ಶಾಸಕ ದಿ. ಎಂ.ಪಿ. ರವೀಂದ್ರ ನಿಧನರಾಗಿದ್ದಾರೆ.

ನಾಳೆ ದಿನಾಂಕ 30ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಎಂ.ಪಿ. ಪ್ರಕಾಶ್ ಅವರ ಸಮಾಧಿ ಬಳಿಯೇ ರುದ್ರಾಂಬ ಅವರ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

## ಭೂಸೇನೆಯಿಂದ ನಿವೃತ್ತರಾಗಿ ಸೈನಿಕ ಹನುಮಂತಪ್ಪ ವಾಪಸ್ ಸ್ವಗ್ರಾಮಕ್ಕೆ



ಹರಿಹರ, ಏ. 29 - ಭಾರತೀಯ ಭೂಸೇನೆಯಲ್ಲಿ ಸೈನಿಕರಾಗಿ 17 ವರ್ಷಗಳ ಕಾಲ ದೇಶ ರಕ್ಷಣೆ ಮಾಡಿ, ನಿವೃತ್ತರಾಗಿರುವ ಹರಿಹರ ತಾಲ್ಲೂಕು ಹರಳಹಳ್ಳಿಯ ಹನಮಂತಪ್ಪ ಡಿ.ಹೆಚ್. ಅವರು ತಮ್ಮ ಸ್ವಗ್ರಾಮಕ್ಕೆ ಆಗಮಿಸುತ್ತಿದ್ದಾರೆ.

ಮೇ 2ರಂದು ಮಧ್ಯಾಹ್ನ 3 ಗಂಟೆಗೆ ಹರಳಹಳ್ಳಿ ಗ್ರಾಮಸ್ಥರಿಂದ ಮಲೇಬೆನ್ನೂರು ಸರ್ಕಾರಿ ಆಸ್ಪತ್ರೆಯಿಂದ ಪಿ.ಡಬ್ಲ್ಯೂಡಿ ಕಛೇರಿವರೆಗೂ ಹಾಗೂ ಹರಳಹಳ್ಳಿ ಬಸ್ ನಿಲ್ದಾಣದಿಂದ ಶ್ರೀ ಆಂಜನೇಯ ದೇವಸ್ಥಾನದವರೆಗೂ ಮೆರವಣಿಗೆ ಮೂಲಕ ಸ್ವಾಗತಿಸಲಾಗುತ್ತದೆ. ನಂತರ ಅಂದು ಸಂಜೆ 5ಕ್ಕೆ ಹರಳಹಳ್ಳಿ ಗ್ರಾಮಸ್ಥರಿಂದ ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯುವುದು.

# ಪ್ರಜ್ವಲ್ ರೇವಣ್ಣ ಉಚ್ಚಾಟನೆ

### ಲೈಂಗಿಕ ದೌರ್ಜನ್ಯ ಆರೋಪ ಹಿನ್ನೆಲೆ: ಕ್ರಮಕ್ಕೆ ಮುಂದಾದ ಜೆಡಿಎಸ್



ಬೆಂಗಳೂರು, ಏ. 29 – ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು ಜೆಡಿಎಸ್‌ನಿಂದ ಉಚ್ಚಾಟನೆ ಆಗಲಿದ್ದಾರೆ.

ಆರೋಪಗಳ ಹಿನ್ನೆಲೆಯಲ್ಲಿ ಸಂಸದರ ಮೇಲೆ ಕಠಿಣ ಕ್ರಮಕ್ಕೆ ಮುಂದಾಗಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡರ ಸಲಹೆಯಂತೆ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು, ಪ್ರಜ್ವಲ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂಬಂಧ ನಾಳೆ ಹುಬ್ಬಳ್ಳಿಯಲ್ಲಿ ತುರ್ತು ಕೋರ್ ಕಮಿಟಿ ಸಭೆ ಕರೆದಿದ್ದಾರೆ.

ಮಾಜಿ ಸಚಿವ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿ ಸಭೆ ನಡೆಯಲಿದ್ದು, ಅಲ್ಲಿ ಪ್ರಜ್ವಲ್ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಿ, ಕ್ರಮದ ಕುರಿತು ನಿರ್ಧರಿಸಲಿದ್ದಾರೆ.

ಮೊದಲ ಹಂತದಲ್ಲಿ ನಡೆದ 14 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ ಸಂಬಂಧಿಸಿದಂತೆ ಎನ್‌ಡಿಎ ಮೈತ್ರಿಕೂಟ ಎಷ್ಟು ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂಬ ಬಗ್ಗೆಯೂ ಸಭೆಯಲ್ಲಿ ಚಿಂತನ-ಮಂಥನ ನಡೆಯಲಿದೆ.

ಇದೇ ಸಂದರ್ಭದಲ್ಲಿ ಹಾಸನ ಲೋಕಸಭಾ ಚುನಾವಣೆಯ ಅಂತಿಮ ಘಟ್ಟದಲ್ಲಿ ಪ್ರಜ್ವಲ್ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಹಾಗೂ ಅವರ ವಿರುದ್ಧ ಬಿಡುಗಡೆ ಮಾಡಿರುವ ಪೆನ್ ಡ್ರೈವ್, ಇದರ ಹಿಂದಿರುವ ಷಡ್ಯಂತ್ರ, ಎಲ್ಲದರ ಬಗ್ಗೆಯೂ ಚರ್ಚೆಯಾಗಲಿದೆ. ಪ್ರಜ್ವಲ್ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಎನ್‌ಡಿಎ ಮೈತ್ರಿಕೂಟಕ್ಕೆ ಕಳಂಕ ತರಲು ವಿರೋಧಿಗಳು ಬಳಸುತ್ತಾರೆ. ಸಂಸದ ದೌರ್ಜನ್ಯದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ ಅವರನ್ನು ಪಕ್ಷದಿಂದ ಉಚ್ಚಾಟಿಸುವ ಬಗ್ಗೆ ತೀರ್ಮಾನವಾಗಲಿದೆ.

### ನಾಲ್ಕೈದು ವರ್ಷಗಳ ಹಿಂದಿನ ವಿಷಯಕ್ಕೆ ಈಗ ಷಡ್ಯಂತ್ರ

ಬೆಂಗಳೂರು, ಏ. 29 – ನಾಲ್ಕೈದು ವರ್ಷಗಳ ಹಿಂದಿನ ವಿಷಯವನ್ನು ತಂದು ಈಗ ತಮ್ಮ ಪುತ್ರ ಹಾಗೂ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ದೂರು ನೀಡಲಾಗಿದೆ. ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂದು ಶಾಸಕ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ರೇವಣ್ಣ ಆರೋಪಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇದೆಲ್ಲಾ ಷಡ್ಯಂತ್ರ. ಇದಕ್ಕೆಲ್ಲಾ ಹೆದರಿ ಓಡಿ ಹೋಗುವುದಿಲ್ಲ. ಕಾನೂನು ಹೋರಾಟ ಮಾಡುತ್ತೇನೆ ಎಂದವರು ಹೇಳಿದ್ದಾರೆ.

ನನ್ನ ವಿರುದ್ಧ ನೀಡಿದ ದೂರಿನ ಬಗ್ಗೆ ಯಾವುದೇ ಪ್ರತಿಕ್ರಿಯೆ ಕೊಡಲ್ಲ. ಸರ್ಕಾರ ಈ ವಿಷಯವನ್ನು ಎಸ್‌ಐಟಿಗೆ ವಹಿಸಿದೆ. ಎಸ್.ಐ.ಟಿ. ತನಿಖೆ ಮಾಡಲಿ ಎಂದು ಹೇಳಿದ್ದಾರೆ.

ಪ್ರಜ್ವಲ್ ರೇವಣ್ಣ ವಿದೇಶ ಪ್ರಯಾಣ ಮೊದಲೇ ನಿರ್ಧಾರವಾಗಿತ್ತು. ಎಫ್‌ಐಆರ್ ಹಾಕುತ್ತಾರೆ ಅನ್ನುವುದು ಗೊತ್ತಿರಲಿಲ್ಲ. ತನಿಖೆಗೆ ಕರೆದರೆ ಅವನೂ ಬರುತ್ತಾನೆ.

ದೇವೇಗೌಡರ ಕುಟುಂಬದ ವಿರುದ್ಧ ಷಡ್ಯಂತ್ರ ಹೊಸದಲ್ಲ. ಇಂತಹ ಹಲವು ತನಿಖೆ ನಾವು ಎದುರಿಸಿದ್ದೇವೆ. ದೇವೇಗೌಡರ ಮೇಲೆ ಸಿಒಡಿ ತನಿಖೆ ನಡೆಸಿದ್ದರು ಎಂದು ಹೇಳಿದ್ದಾರೆ.

## ಸೂಳೆಕೆರೆ ಸಂರಕ್ಷಣೆ ಹೊಣೆ ಹೊತ್ತವರಿಗೆ ಮತ ನೀಡಲು ಪಾಂಡೋಮಟ್ಟಿ ಸ್ವಾಮೀಜಿ ಕರೆ



ದಾವಣಗೆರೆ, ಏ.29- ಏಷ್ಯ ಖಂಡದ ಎರಡನೇ ದೊಡ್ಡ ಕೆರೆ ಸೂಳೆಕೆರೆಯನ್ನು ಸಂರಕ್ಷಿಸುವುದಾಗಿ ಬಹಿರಂಗವಾಗಿ ಹೇಳಿಕೆ ನೀಡುವ ಪಕ್ಷ ಅಥವಾ ವ್ಯಕ್ತಿಗೆ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಪಾಂಡೋಮಟ್ಟಿ ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮೀಜಿ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸೂಳೆಕೆರೆಯ ಒತ್ತುವರಿ ತೆರವುಗೊಳಿಸಿ, ಹೂಳು ತೆಗೆಸುವ ಮೂಲಕ ಕೆರೆಯ ನೀರಿನ ಶೇಖರಣಾ ಸಾಮರ್ಥ್ಯ ಹೆಚ್ಚಿಸಬೇಕೆಂದು ಒತ್ತಾಯಿಸಿ, ಖಡ್ಗ ಸಂಘ ಹಾಗೂ ಸೂಳೆಕೆರೆ ಸಂರಕ್ಷಣಾ ಸಂಸ್ಥೆಯಿಂದ ಕಳೆದ ಏಳು ವರ್ಷಗಳಿಂದ ಸತತವಾಗಿ ಹೋರಾಟ ಮಾಡಿಕೊಂಡು ಬರಲಾಗಿದೆ. ಆದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಬೇಡಿಕೆ ಈಡೇರಿಲ್ಲ ಎಂದು ಆರೋಪಿಸಿದರು. ಖಡ್ಗ ಸಂಘದ ಅಧ್ಯಕ್ಷ ಬಿ.ಆರ್. ರಘು ಮಾತನಾಡಿ, 'ಜಿಲ್ಲೆಯಲ್ಲಿ ಸೂಳೆಕೆರೆ ವಿಷಯಕ್ಕೆ ಸಂಬಂಧಿಸಿದಂತೆ 2 ಲಕ್ಷಕ್ಕೂ ಹೆಚ್ಚು ಬೆಂಬಲಿಗರನ್ನು ಹೊಂದಿದೆ. ಈ ಕೆರೆಯನ್ನು ಸಂರಕ್ಷಿಸುವುದಾಗಿ ಬಿಜೆಪಿ, ಕಾಂಗ್ರೆಸ್ ಅಥವಾ ಸ್ವತಂತ್ರ ಅಭ್ಯರ್ಥಿ ಯಾರೇ ಮುಂದೆಬಂದು ಬಹಿರಂಗವಾಗಿ ಭರವಸೆ ನೀಡಿದರೂ, ಚುನಾವಣೆಯಲ್ಲಿ ನಮ್ಮ ಸಂಘದಿಂದ ಆ ಅಭ್ಯರ್ಥಿಗೆ ಮತ ನೀಡುವಂತೆ ಮತದಾರರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಚಂದ್ರಹಾಸ ಲಿಂಗದಹಳ್ಳಿ, ಕುಬೇಂದ್ರಸ್ವಾಮಿ ಇದ್ದರು.

## 'ನಿಮ್ಮ ಬಗ್ಗೆ ಗೊತ್ತು' ಎಂದ ಮೋದಿ ಶಾಸಕ ಬಿ.ಪಿ. ಹರೀಶ್ ಹರ್ಷ



ದಾವಣಗೆರೆ, ಏ. 29- ಪ್ರಧಾನಿ ನರೇಂದ್ರ ಮೋದಿ ಅವರ ಪ್ರೀತಿ ಹಾಗೂ ಅವರ ಅರಿವಿನ ಸಾಮರ್ಥ್ಯಕ್ಕೆ ಶಾಸಕ ಬಿ.ಪಿ. ಹರೀಶ್ ಹರ್ಷ ವ್ಯಕ್ತಪಡಿಸಿದ್ದಾರೆ.

ನಗರದ ಹೈಸ್ಕೂಲ್ ಮೈದಾನದಲ್ಲಿ ಭಾನುವಾರ ನಡೆದ ಬಿಜೆಪಿ ಸಮಾವೇಶದಲ್ಲಿ ಪ್ರಧಾನಿಯವರು ನನ್ನ ಕೈ ಕುಲುಕಿದರು. ಈ ವೇಳೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ನನ್ನನ್ನು ಪ್ರಧಾನಿಗೆ ಪರಿಚಯಿಸುತ್ತಿದ್ದಂತೆಯೇ ಇವರ ಬಗ್ಗೆ ಹಾಗೂ ಇವರ ಹೋರಾಟದ ಬಗ್ಗೆಯೂ ನನಗೆ ತಿಳಿದಿದೆ ಎಂದಾಗ ನನಗೆ ಅಚ್ಚರಿ ಹಾಗೂ ಅತೀವ ಸಂತೋಷವೂ ಆಯಿತು ಎಂದು ಹರೀಶ್ ಹೇಳಿದ್ದಾರೆ.

ಇಡೀ ದೇಶದ ಹೊಣೆ ಹೊತ್ತಿರುವ ಪ್ರಧಾನಿಯವರು ದಾವಣಗೆರೆ ಜಿಲ್ಲೆಯಲ್ಲಿ ಗೆದ್ದ ಓರ್ವ ಶಾಸಕನ ಬಗ್ಗೆ ತಿಳಿದುಕೊಂಡಿದ್ದಾರೆ ಎಂದರೆ ಅವರ ಕಾರ್ಯವೈಖರಿ ಮೆಚ್ಚುವಂತಹದ್ದು ಎಂದು ಹರೀಶ್ ಹೇಳಿದರು.

## ರಾಯಚೂರಿನಲ್ಲಿ 43 ಡಿಗ್ರಿ ಸೆಲ್ಸಿಯಸ್ ತಾಪಮಾನ

ಬೆಂಗಳೂರು, ಏ. 29 – ರಾಜ್ಯದಲ್ಲಿ ಬಿಸಿಲ ಬೇಗೆ ಮುಂದುವರೆದಿದ್ದು, ರಾಯಚೂರಿನಲ್ಲಿ ಅತಿ ಹೆಚ್ಚಿನ 43 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ರಾಜಧಾನಿ ಬೆಂಗಳೂರಿನಲ್ಲಿ ಸತತ ಎರಡನೇ ದಿನ ಗರಿಷ್ಠ ತಾಪಮಾನ 38.5 ಡಿಗ್ರಿ ಸೆಲ್ಸಿಯಸ್ ಆಗಿದೆ ಎಂದು ಹವಾಮಾನ ಇಲಾಖೆಯ ಬೆಂಗಳೂರು ಕೇಂದ್ರದ ನಿರ್ದೇಶಕ ಸಿ.ಪಿ. ಪಾಟೀಲ್ ತಿಳಿಸಿದ್ದಾರೆ.

ಹಾವೇರಿ, ವಿಜಯಪುರ, ಬಾಗಲಕೋಟೆ, ಕಲಬುರಗಿ, ದಾವಣಗೆರೆ ಹಾಗೂ ಕೊಪ್ಪಳಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ಗೂ ಹೆಚ್ಚಾಗಿದೆ.


ನಿಮಗೆ ಈ ಕೆಳಕಂಡ ಸಂಧಿವಾತದ ಲಕ್ಷಣಗಳಿವೆಯೇ ?



- ಕೈ ಕಾಲು ಗಂಟುಗಳಲ್ಲಿ ನೋವು ಮತ್ತು ಬಾವು ಇದೆಯೇ ?
- ನಿಮ್ಮ ಕೈ ಮತ್ತು ಕಾಲುಗಳ ಗಂಟುಗಳಲ್ಲಿ ವಿರೂಪ (Deformities)ಇದೆಯೇ ?
- ಬೆಳಿಗ್ಗೆ ಎದ್ದಾಗ ಸೊಂಟ ನೋವು ಮತ್ತು ಕತ್ತು ನೋವು ಇದೆಯೇ ?
- ಬೆನ್ನು ನೋವು ಮತ್ತು ಸೊಂಟ ನೋವಿನ ಜೊತೆಗೆ ಕಣ್ಣು ಕೆಂಪಾಗಿ ನೋಯುವುದೇ, ಅಥವಾ ಮಂಜಾಗಿ ಕಾಣುವುದೇ ?
- ಗಂಟು ನೋವಿನ ಕಾಯಿಲೆ ಇದನ್ನು ಪ್ರಾಥಮಿಕ ಹಂತದಲ್ಲಿಯೇ ಕಂಡು ಹಿಡಿದರೆ ನಿಯಂತ್ರಿಸಬಹುದು. ವಿರೂಪ (Deformities) ಆದವರಿಗೆ ಮುಂದೆ ಆಗುವ ತೊಂದರೆಯನ್ನು ತಡೆಯಬಹದು.

✓ RHEUMATOID ARTHRITIS ✓ ANKYLOSING SPONDYLITIS ✓ GOUT ✓ PSORATIC ARTHRITIS ✓ SLE

ಈ ಮೇಲ್ಕಂಡ ಲಕ್ಷಣಗಳ ಯಾವುದೇ ತೊಂದರೆ ಇದ್ದಲ್ಲಿ

ಡಾ. ಸೋಮಶೇಖರ್ (Rheumatologist) ಇವರು

ಮೇ 01 ಬುಧವಾರ ಮತ್ತು ಮೇ 02 ಗುರುವಾರ 2024

ಅನುಗ್ರಹ ಹಾಸ್ಪಿಟಲ್

ಎಂ.ಸಿ.ಸಿ. 'ಬಿ' ಬ್ಲಾಕ್ ದಾವಣಗೆರೆಯಲ್ಲಿ ತಪಾಸಣೆಗೆ ಲಭ್ಯವಿರುತ್ತಾರೆ.

ಫೋ. : 08192 222292



ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷರೂ, ಯುವ ಕಾಂಗ್ರೆಸ್ ನಗರ ಘಟಕದ ಮಾಜಿ ಅಧ್ಯಕ್ಷರೂ ಆದ

ಶ್ರೀ ಶಂಭು ಎಸ್. ಉರೇಕೊಂಡಿ

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ರಾಜಕೀಯ ಜೀವನ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಶಂಭು ಅವರಿಗೆ ಭಗವಂತ ಇನ್ನಷ್ಟು ಚೈತನ್ಯ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಶುಭ ಕೋರುವವರು :

ಅಖಿಲ ಭಾರತ ವೀರಶೈವ – ಲಿಂಗಾಯತ ಮಹಾಸಭಾ ಜಿಲ್ಲಾ ಯುವ ಘಟಕದ ಸರ್ವ ಸದಸ್ಯರು


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas